

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 07 | Issue : 316 | Sunday 31-08-2025 | E-mail : maruti.b.hosamani76@gmail.com | Page: 4 | Price : Rs. 1/-




## ಗಣೇಶ ಚತುರ್ಥಿ ಅತ್ಯಂತ ಸಂಭ್ರಮ–ಸಡಗರದಿಂದ ಆಚರಿಸಲಾಯಿತು

**ಸಿಹಿ ಕಹಿ ಸುದ್ದಿ,**

**ಅಮೀನಗಡ :** ಪಟ್ಟಣದ ವಾರ್ಡ್ ನಂಬರ್ 08 ವಡ್ಡರ್ ಕಾಲೋನಿಯಲ್ಲಿ ಶ್ರೀ ಸಿದ್ದರಾಮೇಶ್ವರ ಗಜಾನನ ಯುವಕರ ಸಂಘದ ವತಿಯಿಂದ 21 ನೇ. ವರ್ಷದ ಗಣೇಶೋತ್ಸವ ಕಾರ್ಯಕ್ರಮವನ್ನು ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತಿದೆ. ಬುಧವಾರ ಬೆಳಿಗ್ಗೆ ಯಿಂದಲೇ ಚೌತಿ ಸಂಭ್ರಮದ ಗರಿಗೆದರಿತು. ಹೊಸ ಧಿರಿಸು ಧರಿಸಿ ಚಿಣ್ಣರು ವಯಸ್ಕರು ಗಣಪನನ್ನು ಬರಮಾಡಿ ಕೊಳ್ಳಲು ಅಣಿಯಾಗಿದ್ದರು. ಪಟ್ಟಣದ ಮುಖ್ಯ ರಸ್ತೆಯ ಮುಖಾಂತರ ಚಿತ್ತರಗಿಯ ಕ್ರಾಸ್ ಮೂಲಕ ವಾರ್ಡ್ ನಂಬರ್ 08 ನೇ. ವರೆಗೆ ವಾದ್ಯ ಮೇಳಗಳೊಂದಿಗೆ ಗಣೇಶನ ಭವ್ಯ ಮೆರವಣಿಗೆ ಜರುಗಿತು. ನಂತರ ಶ್ರೀ ನರಸಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ಫಲ ಪುಷ್ಪಗಳಿಂದ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಗಣೇಶನ ಮೆರವಣಿಗೆ ಹಾಗೂ ಪೂಜಾ ಕೈಂಕಾರ್ಯಗಳಲ್ಲಿ ಗಜಾನನ ಸಮಿತಿ ಅಧ್ಯಕ್ಷ ಶ್ರೀ ಸಂತೋಷ ಪಾತ್ರೋಟಿ ಉಪಾಧ್ಯಕ್ಷ ಮಹಾಂತೇಶ್ ಕೆಂಚಪ್ಪ ಕಲ್ಲಕುಟಗರ, ಯಮನಪ್ಪ ಹಣಮಪ್ಪ ಕಲ್ಲಕುಟಗರ, ಪರಸಪ್ಪ ಕಲ್ಲಕುಟಗರ, ಸುರೇಶ್ ಐಹೊಳ್ಳಿ, ಕುಮಾರ ಕಲ್ಲಕುಟಗರ, ಮಂಜುನಾಥ್ ಐಹೊಳ್ಳಿ, ಬಸವರಾಜ್ ಹಳ್ಳೂರ್, ಬಸವರಾಜ್ ಪಾತ್ರೋಟಿ, ರಾಘವೇಂದ್ರ ಹುನಗುಂದ ಹಾಗೂ ಶ್ರೀ ಸಿದ್ದರಾಮೇಶ್ವರ ಗಜಾನನ ಯುವಕರ ಸಂಘದ ಎಲ್ಲಾ ಸದಸ್ಯರು ಭಾಗಿಯಾಗಿದ್ದರು.

## ಬತ್ತಾಡ ಸಮುದಾಯಕ್ಕೆ ಒಳ ಮೀಸಲಾತಿಯಲ್ಲಿ ಅನ್ಯಾಯ ಹೋರಾಟದ ಮುಂದಿನ ನಡೆ – ನಿರ್ಧರಿಸಲು ಪ್ರಮುಖರ ಸಭೆ

**ಸಿಹಿ ಕಹಿ ಸುದ್ದಿ,**

**ಉಡುಪಿ :** ನಾಗದಾಸ ಮೋಹನ್ ವರದಿಯ ಆಧಾರದ ಮೇಲೆ ಸರ್ಕಾರವು ಜಾರಿಗೆ ತರಲು ಉದ್ದೇಶಿಸಿರುವ ಒಳ ಮೀಸಲಾತಿ ನೀತಿಯಿಂದ ಬತ್ತಾಡ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಇದನ್ನು ಸರಿ ಪಡಿಸಲು ಹಾಗೂ ಮುಂದಿನ ಹೋರಾಟದ ರೂಪು ರೇಷೆಗಳನ್ನು ಸಿದ್ಧ ಪಡಿಸಲು ಆಗಸ್ಟ್ 31, 2025 ರಂದು ಭಾನುವಾರ ಮಧ್ಯಾಹ್ನ 2 ಗಂಟೆಗೆ ಕೋಟ ಮೂರ್ಕೈ ಪೆಟ್ರೋಲ್ ಬಂಕ್ ಎದುರಿನ ಪಂಚಶೀಲದಲ್ಲಿ ಬತ್ತಾಡ ಸಮುದಾಯದ ಪ್ರಮುಖರ ಸಭೆ ಕರೆಯಲಾಗಿದೆ.

ನಾಗದಾಸ ಮೋಹನ್ ವರದಿಯ ಅನ್ಯಾಯದ ಕುರಿತು:–

ನಾಗದಾಸ ಮೋಹನ್ ವರದಿಯು ಬತ್ತಾಡ ಮತ್ತು ಅಲೆಮಾರಿ ಸಮುದಾಯಗಳಂತಹ ಸಣ್ಣ ಸಮುದಾಯಗಳಿಗೆಶೇಕಡಾ1ರಷ್ಟುಮೀಸಲಾತಿಯನ್ನು ಪ್ರತ್ಯೇಕವಾಗಿ ಶಿಫಾರಸ್ಸು ಮಾಡಿತ್ತು. ಆದರೆ, ಸರ್ಕಾರದ ಪ್ರಸ್ತುತ ನೀತಿಯಲ್ಲಿ ಈ ಮೀಸಲಾತಿಯನ್ನು ಈಗಾಗಲೇ ಹೆಚ್ಚಿನ ಪ್ರಯೋಜನ ಪಡೆದಿರುವ ಹೊಲೆಯ ಸಮುದಾಯದೊಂದಿಗೆ ವಿಲೀನ ಗೊಳಿಸಲಾಗಿದೆ. ಇದು ಸುಪ್ರೀಂ ಕೋರ್ಟ್ ಆದೇಶಗಳಿಗೆ ವಿರುದ್ಧವಾಗಿದ್ದು, ಬತ್ತಾಡ ಸಮುದಾಯದ ಮಕ್ಕಳು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗುವ ಅಪಾಯವಿದೆ.

**ಹೋರಾಟದ ಸಿದ್ಧತೆ:–**

ಈ ತೀವ್ರ ಅನ್ಯಾಯವನ್ನು ವಿರೋಧಿಸಿ, ಸಮುದಾಯದ ಹಕ್ಕುಗಳನ್ನು ರಕ್ಷಿಸಲು ತುರ್ತು ಹೋರಾಟ ರೂಪಿಸುವುದು ಇಂದಿನ ಅಗತ್ಯವಾಗಿದೆ. ಸಭೆಯಲ್ಲಿ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಹೇಗೆ ಮತ್ತು ಭವಿಷ್ಯದ ಹೋರಾಟಗಳ ಸ್ವರೂಪದ ಬಗ್ಗೆ ಚರ್ಚಿಸಲಾಗುವುದು.



ಬತ್ತಾಡ ಸಮುದಾಯದ ಹಿತ ಚಿಂತಕರು, ಹಿರಿಯರು, ಮತ್ತು ಯುವ ನಾಯಕರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವ ಮೂಲಕ ಹೋರಾಟಕ್ಕೆ ಹೊಸ ದಿಕ್ಕು ನೀಡಬೇಕೆಂದು ಕೋರಲಾಗಿದೆ.

ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸಲು ಇದು ಒಂದು ನಿರ್ಣಾಯಕ ಸಂದರ್ಭವಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು:

ಪ್ರಕಟಣೆ:9964237090

ನಾರಾಯಣ್ ಮಣೂರ್

(ಬತ್ತಾಡ ಸಮುದಾಯದ ಪರವಾಗಿ)

# ಸಾಲ ಮರು ಪಾವತಿ ಮಾಡಲು ಆಗದೆ ನೋಟಿಸ್‌ಗೆ ಹೆದರಿ – ರೈತ ಆತ್ಮಹತ್ಯೆ

**ಸಿಹಿ ಕಹಿ ಸುದ್ದಿ,**

**ದೇವರ ನಾವದಗಿ :** ಈ ದೇಶದ ಬೆನ್ನೆಲುಬಾದ ರೈತನಿಗೆ ಸಾಲದ ಬಾಧೆ ಮತ್ತು ವರುಣರಾಯನ ಆರ್ಭಟಕ್ಕೆ ಬೆಳೆ ಹಾನಿಯಾಗಿ ಸಾಲ ಮರು ಪಾವತಿ ಮಾಡಲು ಆಗದೆ ರೈತ ಶಂಕ್ರಪ್ಪ ಮಲಕಪ್ಪ ಯರಗಲ ಸಾಲಕ್ಕೆ ಹೆದರಿ ನೇಣಿಗೆ ಶರಣಾಗಿರುವ ಘಟನೆ ಆಲಮೇಲ ತಾಲೂಕಿನ ದೇವರ ನಾವದಗಿ ಗ್ರಾಮದಲ್ಲಿ ನಡೆದಿದೆ. ಬಿಟ್ಟು ಬಿಡದೆ ಮಳೆಯಾಗಿ ಬೆಳೆ ಹಾನಿ ಯಾಗಿರುವುದರಿಂದ ಸ್ವಾಭಿಮಾನಿ ರೈತ ಇಂದು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪರಿಸ್ಥಿತಿ ಬಂದು ಒದಗಿದೆ.



ಸ್ವಾಭಿಮಾನಿ ರೈತ ಶಂಕ್ರಪ್ಪ ಮಲಕಪ್ಪ ಯರಗಲ್ ಮಲಗಾಣ ಗ್ರಾಮದಲ್ಲಿ ಸ್ವಂತ ಹೊಲದಲ್ಲಿ ಒಕ್ಕಲುತನ ಮಾಡಿ ಕೊಂಡು ಬದುಕು ಸಾಗಿಸುತ್ತಿದ್ದ ಮಕ್ಕಳ ಮದುವೆ ನಿಮಿತ್ಯವಾಗಿ ಹಾಗೂ ಪ್ರಾಪಂಚಿಕ ಆಚರಣೆಗಾಗಿ ಸ್ವಸಾಹಯ ಸಂಘಗಳಲ್ಲಿ ಸಾಲ ಪಡೆದಿದ್ದ ಸಾಲ ಮರು ಪಾವತಿಸಲು ಆಗದೆ ಬ್ಯಾಂಕಿನ ನೋಟಿಸಿಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಆಲಮೇಲ ತಾಲೂಕಿನ ದೇವರ ನಾವದಗಿ ಗ್ರಾಮದಲ್ಲಿ ನಡೆದಿದೆ. ಆಲಮೇಲ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿದ್ದು. ಘಟನಾ ಸ್ಥಳಕ್ಕೆ ಕ್ರೈಂ ಪಿ.ಎಸ್.ಐ ಎಸ್.ಎಮ್ ಪಡಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರೇವಣಸಿದ್ದಯ್ಯ.ಜಿ.ಹಿರೇಮಠ. ಆಲಮೇಲ**






# ವಿಘ್ನ ನಿವಾರಕ ಗಣೇಶ ಮೂರ್ತಿ ಪ್ರತಿಷ್ಠಾಪನೆ



**ಕಂದಗಲ್ಲ :** ಗ್ರಾಮದ ಶ್ರೀ ಹುಗ್ಗಿ ಬಸವೇಶ್ವರ ಯುವಕ ಮಂಡಳಿ ಯವರು ಗ್ರಾಮದ ಪ್ರಮುಖ ಸ್ಥಳ ಚಾವಡಿ ಕಟ್ಟಡದಲ್ಲಿ ಸರ್ವ ಜನರ ವಿಗ್ನಗಳ ನಿವಾರಣೆಗಾಗಿ ಗಣೇಶ್ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದಾರೆ.

ಸಂದರ್ಭದಲ್ಲಿ ಮಾತನಾಡಿದ ಸಜ್ಜಲಶ್ರೀ ಶಿಕ್ಷಣ ಸಂಸ್ಥೆಯ ಬಿ ಎಂ ಮಸ್ಕಿಮಠ ಗುರುಗಳು ಸತತವಾಗಿ ಅಂದಾಜು 25 ವರ್ಷದಿಂದ ಗಣಪತಿ ಹಬ್ಬವನ್ನು ಅತಿ ವಿಜೃಂಭಣೆ ಯಿಂದ ಸ್ಥಳೀಯ ಹುಗ್ಗಿ ಬಸವೇಶ್ವರ ಯುವಕ ಮಂಡಳಿಯವರು ಮಾಡುತ್ತಿರುವದು ಶ್ಲಾಘನಿಯ ಎಂದರು.

ಸಂತೋಷ್ ಗುರುವಿನಮಠ, ಶಿವಕುಮಾರ್ ಮೂಲಿಮಠ, ವಿರುಪಾಕ್ಷಯ್ಯ ಗುರುವಿನಮಠ, ಪ್ರಶಾಂತ್ ಸಜ್ಜನ್, ವೀರೇಶ್ ಸಜ್ಜನ್, ರುದ್ರೇಶ್ ವೀರಾಪುರ್, ಮುತ್ತು ಸಜ್ಜನ್, ವಿನಾಯಕ್ ಸಜ್ಜನ್, ಮುತ್ತು ಕುಸುಬಿ, ಮುತ್ತು ಹುಜರತಿ, ಈರಪ್ಪ ಗೋದಿ,ಶಿವು ಅಳ್ಳಳ್ಳಿ, ಮಹಾಂತೇಶ್ ಸಜ್ಜನ್, ವಿನಾಯಕ ಗಾಣಿಗೇರ್, ನಾಗರಾಜ ತಳವಾರ್, ಗುರು ಸಜ್ಜನ್,ಹುಸೇನ್ ಬಲಕುಂದಿ,ಲಿಂಗರಾಜ ಶಿರಗುಂಪಿ, ಈರಣ್ಣ ಹುಣಸಿಸೆಟ್ಟರ್, ಕುಮಾರಸ್ವಾಮಿ,ನಾಗರಾಜ ಮಡಿವಾಳರ, ಮನೋಜ್ ಸಜ್ಜನ, ಮುತ್ತು ಚಂದ್ರಶೇಖರ ಸಜ್ಜನ, ವಿನಾಯಕ್ ಕೊಡಕೇರಿ, ಇದ್ದರು.

## ಸೊಮ್ಮೈಯಾ ಶಾಲೆಗೆ ರೋಪ್ ಸ್ಕಿಪ್ಪಿಂಗ್‌ನಲ್ಲಿ 18 ಚಿನ್ನದ ಪದಕ: ಚಾಂಪಿಯನ್ಸ್ ಟ್ರೋಫಿ



**ಮಹಾಲಿಂಗಪುರ :** ಇತ್ತೀಚೆಗೆ ವಿಜಯಪುರದ ಡಾ. ಬಿ. ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ರೋಪ್ ಸ್ಕಿಪ್ಪಿಂಗ್ ಸ್ಪರ್ಧೆಯಲ್ಲಿ ಸಮೀಪದ ಸಮೀರವಾಡಿಯ ಸೋಮೈಯಾ ಶಿಶು ನಿಕೇತನ ಹಾಗೂ ವಿನಯ ಮಂದಿರ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಚಿನ್ನದ ಪದಕ ಮತ್ತು ಚಾಂಪಿಯನ್ಸ್ ಟ್ರೋಫಿ ಪಡೆದು ಕೊಂಡಿದ್ದಾರೆ. ಕರ್ನಾಟಕ ರಾಜ್ಯ ರೋಪ್ ಸ್ಕಿಪ್ಪಿಂಗ್ ಅಸೊಶಿಯೇಶನ್ ಹಾಗೂ ಫ್ರೀ ಸ್ಟೈಲ್ ರೋಪ್ ಸ್ಕಿಪ್ಪಿಂಗ್ ಅಸೋಸಿಯೇಷನ್ ವಿಜಯಪುರ ಇವರ ಸಹಯೋಗದಲ್ಲಿ ನಡೆದ ಚಾಂಪಿಯನ್ಸ್– 2025 ಸ್ಪರ್ಧೆಯಲ್ಲಿ ಸೋಮೈಯಾ ಶಾಲೆಯ ವಿದ್ಯಾರ್ಥಿಗಳು 18 ಚಿನ್ನ,16 ಬೆಳ್ಳಿ,12 ಕಂಚಿನ ಪದಕ ಮತ್ತು ಟ್ರೋಫಿ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ದೈಹಿಕ ಶಿಕ್ಷಕರಾದ ಮಹಾಂತೇಶ ಪುರವಂತ, ಬಸವರಾಜ ಕುರಾಡೆ ಮತ್ತು ಸುರೇಶ ಬೂದಿಹಾಳ ತರಬೇತಿ ನೀಡಿದ್ದರು. ವಿಜೇತ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸದಸ್ಯ ಡಾ. ವ್ಹಿ. ಪಿ. ಕಣವಿ, ಅವಳಿ ಶಾಲೆಯ ಮುಖ್ಯೋಪಾದ್ಯಾಯ ಬಿ.ಡಿ.ನ್ಯಾಮಗೌಡ ಮತ್ತು ವ್ಹಿ.ಎಚ್.ಭಜಂತ್ರಿ ಅಭಿನಂದಿಸಿದ್ದಾರೆ.

**ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಪ್ರತಿ ವರ್ಷ ಕ್ರೀಡೆಗಳಲ್ಲಿ ಸಾಧನೆಗಳನ್ನು ಹೆಚ್ಚಿಸಿ, ನಮ್ಮ ಸಂಸ್ಥೆಯ ಕೀರ್ತಿಯನ್ನು ರಾಷ್ಟ್ರ ಮಟ್ಟದಲ್ಲಿ ಬೆಳಗುವಂತೆ ಮಾಡುತ್ತಿದ್ದಾರೆ. ಈ ಸಾಧನೆಯು ಆಡಳಿತ ಮಂಡಳಿಗೆ ಖುಷಿ ತಂದಿದೆ.**

**ಡಾ.ವ್ಹಿ.ಪಿ.ಕಣವಿ. ಶಾಲಾ ಆಡಳಿತ ಮಂಡಳಿಯ ಸದಸ್ಯ.**

# ಮಧ್ಯಸ್ಥಿಕೆ ಮೂಲಕ ವ್ಯಾಜ್ಯ ಬಗೆಹರಿಸಿಕೊಳ್ಳಿ: ಹರಸೂರ

**ಜಮಖಂಡಿ :** ಸುಪ್ರೀಮ್ ಕೋರ್ಟ್ ಆದೇಶದ ಮೇರೆಗೆ ದೇಶಾದ್ಯಂತ 90 ದಿನಗಳವರೆಗೆ ರಾಷ್ಟ್ರೀಯ ವಿಶೇಷ ಮಧ್ಯಸ್ಥಿಕೆ ಅಭಿಯಾನ ಆರಂಭಿಸಲಾಗಿದೆ. ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಂಡಲ್ಲಿ ಶಾಶ್ವತ ತೀರ್ಪು ಬರಲಿದ್ದು, ಅಪೀಲು ಮಾಡುವ ಪ್ರಶ್ನೆಯೆ ಉದ್ಭವಿಸುವದಿಲ್ಲ ಎಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜಶೇಖರ ಹರಸೂರ ಹೇಳಿದರು.

ಸ್ಥಳೀಯ ಸಿವಿಲ್ ನ್ಯಾಯಾಲಯದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮಖಂಡಿ ನಗರದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ರಾಷ್ಟ್ರೀಯ ವಿಶೇಷ ಮಧ್ಯಸ್ಥಿಕೆ ಅಭಿಯಾನದ ಮೂಲಕ 90 ದಿನಗಳವರೆಗೆ ಅವಕಾಶ ನೀಡಿದ್ದು ಕಕ್ಷಿದಾರರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.



ವೈವಾಹಿಕ, ಅಪಘಾತ ವಿಮೆ ಪರಿಹಾರ, ಕೌಟುಂಬಿಕ ವ್ಯಾಜ್ಯಗಳು,

ಚೆಕ್ ಬೌನ್ಸ್ ಪ್ರಕರಣಗಳು, ವಾಣಿಜ್ಯ ವ್ಯಾಜ್ಯಗಳು, ಸೇವಾ ಸಂಬಂಧಿತ ಪ್ರಕರಣಗಳು, ಗ್ರಾಹಕ ಸಂಬಂಧಿತ ಪ್ರಕರಣಗಳು, ಸಾಲ ಮರು ವಸೂಲಾತಿ ಪ್ರಕರಣಗಳು, ಸಾಕ್ಷಿ ವ್ಯಾಜ್ಯಗಳು, ಭೂಸ್ವಾಧೀನ ಸಹಿತ ಕೆಲವೊಂದು ಅಪರಾಧ ಪ್ರಕರಣಗಳ ಜೊತೆಗೆ ಇತರೆ ಸಿವಿಲ್ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ. ಮಧ್ಯಸ್ಥಿಕೆ ಮೂಲಕ ಜನತಾ ನ್ಯಾಯಾಲಯದ ತೀರ್ಪು ಅಂತಿಮವಾಗಿರುತ್ತದೆ.

ಜನತಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಶಾಂತಿಯುತ ಜೀವನ ನಡೆಸಲು ಉಭಯ ಕಕ್ಷಿದಾರರಿಗೆ ಇದೊಂದು ಸುವರ್ಣಾವಕಾಶ ಲಭ್ಯವಾಗಿದೆ. ಈ ಕುರಿತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನೀಡಿರುವ ನಿರ್ದೇಶನದ ಪ್ರಕಾರ ಅಭಿಯಾನ ಈಗಾಗಲೇ ಆರಂಭವಾಗಿದೆ ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಅರ್ಶದ್ ಅನ್ಸಾರಿ ಮಾತನಾಡಿ ಸಾರ್ವಜನಿಕರು, ಕಕ್ಷಿದಾರರು ಮಧ್ಯಸ್ಥಿಕೆ ಅಭಿಯಾನದ ಪ್ರಯೋಜನ ಪಡೆಯಲು ನ್ಯಾಯಾಲಯ ಆವರಣದಲ್ಲಿರುವ ಮಧ್ಯಸ್ಥಿಕೆ ಕೇಂದ್ರಕ್ಕೆ ಅಥವಾ ತಾಲೂಕ ಕಾನೂನು ಸೇವಾ ಸಮಿತಿಯ ಕಚೇರಿಗೆ ಸಂಪರ್ಕಿಸಬಹುದು.

ಪರಸ್ಪರ ಒಪ್ಪಿಗೆ ಮತ್ತು ಮಧ್ಯಸ್ಥಿಕೆ ಮೂಲಕ ವ್ಯಾಜ್ಯಗಳನ್ನು ಇತ್ಯಥ–ರ್ ಪಡಿಸಿಕೊಳ್ಳುವ ಆಯ್ಕೆ ಮತ್ತು ಅವಕಾಶವನ್ನು ಕಕ್ಷಿದಾರರಿಗೆ ನೀಡಲಾಗಿದೆ. ಮಧ್ಯಸ್ಥಿಕೆ ಮೂಲಕ ನ್ಯಾಯ ಸಮ್ಮತ, ತ್ವ–ರಿತ, ಕಡಿಮೆ ವೆಚ್ಚದಲ್ಲಿ ನ್ಯಾಯಾಲಯದ ಶುಲ್ಕವಿಲ್ಲದೆ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದರು.

# ಶಾಂತಿಸಾಗರ ಮಹಾರಾಜರ ಪುಣ್ಯತಿಥಿ ಅಂಗವಾಗಿ ಬೈಕ್ ರ್‍ಯಾಲಿ



**ಜಮಖಂಡಿ :** ನಗರದಲ್ಲಿ ಜೈನ ಸಮಾಜ ಹಮ್ಮಿಕೊಂಡಿರುವ ಎಪ್ಪತ್ತನೇ ವರ್ಷದ ಪ.ಪೂ. ಶಾಂತಿಸಾಗರ ಮಹಾರಾಜರ ಪುಣ್ಯತಿಥಿ ಕಾರ್ಯಕ್ರಮದ ಅಂಗವಾಗಿ ಜೈನ ಸಮಾಜದ ಯುವಕರು, ಮುಖಂಡರು ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ್‍ಯಾಲಿ ನಡೆಸಿದರು.

ಪ.ಪೂ. ಶಾಂತಿಸಾಗರ ಮಹಾರಾಜರ ಭಾವಚಿತ್ರ ಹೊತ್ತ ತೆರೆದ ವಾಹನದೊಂದಿಗೆ ರ್‍ಯಾಲಿಗೆ ಬಿ.ಎಲ್.ಡಿ.ಇ. ಸಂಸ್ಥೆ ಅಧ್ಯಕ್ಷ ಅರುಣಕುಮಾರ ಶಹಾ ಚಾಲನೆ ನೀಡಿದರು.

ರ್‍ಯಾಲಿಯಲ್ಲಿ ಸುತ್ತಮುತ್ತಲಿನ ಗ್ರಾಮಗಳ ಜೈನ ಸಮಾಜದ ಯುವಕರು ಧ್ವಜದೊಂದಿಗೆ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಜೈನ ಸಮಾಜದ ಪ್ರಥಮ ಆಚಾರ್ಯರಾಗಿರುವ ಪ. ಪೂ. ಶಾಂತಿಸಾಗರ ಮಹಾರಾಜರ ಪುಣ್ಯತಿಥಿ ಕಾರ್ಯಕ್ರಮ ನಗರದ ಪೋಲೋ ಮೈದಾನದಲ್ಲಿ ಮೂರು ದಿನಗಳ ಕಾಲ ನಡೆಯಲಿದೆ. ರವಿವಾರ ಧಾರ್ಮಿಕ ಕಾರ್ಯಕ್ರಮಗಳು ಮಕ್ಕಳಿಂದ ಮಂತ್ರಗಳ ವಾಚನ ಸ್ಪರ್ಧೆ ಹಾಗೂ ಪ್ರವಚನ ಕಾರ್ಯಕ್ರಮಗಳು ನಡೆದವು. ಮೊದಲನೆ ದಿನ ಬೈಕ್ ರ್‍ಯಾಲಿ ಹಾಗೂ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ನಡೆದವು. ಸಮಾಜದ ಮುಖಂಡರಾದ ದೇವಲ ದೇಸಾಯಿ, ವರ್ಧಮಾನ ನ್ಯಾಮಗೌಡ, ಸಿ. ಟಿ. ಉಪಾಧ್ಯೆ, ದಯಾನಂದ ಶಿರಗಾರ, ಜಯಪಾಲ ನಾಂದ್ರೆಕರ, ವರ್ಧಮಾನ ನ್ಯಾಮಗೌಡ, ಬಸವರಾಜ ಆಲಗೂರ, ವಿನಯ ಸಿದ್ಧಾರ, ಪದ್ಮಣ್ಣ ಜಕನೂರ, ಆರ್. ಪಿ. ನ್ಯಾಮಗೌಡ, ಚಂದು ಪರಮಗೊಂಡ, ಅಣ್ಣಪ್ಪ ಪರಮಗೊಂಡ ಸಹಿತ ಹಲವರು ಪಾಲ್ಗೊಂಡಿದ್ದರು.

# ಅರ್ಬನ್ ಬ್ಯಾಂಕ್ ಸಾಮಾಜಿಕ ಸೇವೆಯಲ್ಲಿ ತೊಡಗಿದೆ: ಜಿ.ಎಸ್. ನ್ಯಾಮಗೌಡ




**ಜಮಖಂಡಿ :** ಅರ್ಬನ್ ಬ್ಯಾಂಕ ಆರಂಭದ ವರ್ಷದಲ್ಲಿ ಕೇವಲ 128 ಸದಸ್ಯರನ್ನು ಹೊಂದಿದ್ದು, 22,025 ರೂ.ಗಳ ಶೇರು ಬಂಡವಾಳದೊಂದಿಗೆ ವಹಿವಾಟು ಪ್ರಾರಂಭಿಸುವ ಮೂಲಕ 85 ವರ್ಷಗಳಲ್ಲಿ ಬೃಹದಾಕಾರವಾಗಿ ಬೆಳೆಯುವ ಮೂಲಕ ಪ್ರಸಕ್ತ ವರ್ಷ 2.8 ಕೋಟಿ ರೂ. ಲಾಭದಲ್ಲಿದೆ ಎಂದು ಹಿರಿಯ ನಿರ್ದೇಶಕ, ವಿಧಾನ ಪರಿಷತ್ ಮಾಜಿ ಸದಸ್ಯ ಜಿ. ಎಸ್.ನ್ಯಾಮಗೌಡ ಹೇಳಿದರು.

ನಗರದ ಬಸವಭವನದ ಸಭಾಭವನದಲ್ಲಿ ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ ಲಿಮಿಟೆಡ್ ಇದರ 85 ನೇ ವಾರ್ಷಿಕ ಸರ್ವ ಸಾಧಾರಣಸಭೆಯಲ್ಲಿಮಾತನಾಡಿದಅವರು, ಬ್ಯಾಂಕಿನ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬರ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಇದು ಯಾರೊಬ್ಬರದೇ ಸಾಧನೆಯಾಗದೇ ಸಮೂಹ ಸಾಧನೆಯಾಗಿದೆ.

ಅರ್ಬನ್ ಬ್ಯಾಂಕ ಆರ್ಥಿಕ ಶಕ್ತಿಯಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದೆ. ಶಿಕ್ಷಣಕ್ಷೇತ್ರದಲ್ಲಿಸಾಧನೆಗೈದವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಹಿತ ವಿವಿಧ ಸೇವೆಗಳಲ್ಲಿ ಬ್ಯಾಂಕ ತೊಡಗಿಸಿಕೊಂಡಿದೆ ಎಂದರು.

ಅರ್ಬನ್ ಬ್ಯಾಂಕ ಅಧ್ಯಕ್ಷ ರಾಹುಲ ಕಲೂತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಒಂದು ವರ್ಷದ ಅವಧಿಯಲ್ಲಿ ಬ್ಯಾಂಕು ಸಾಕಷ್ಟು ಸಾಧನೆ ಮಾಡಿದೆ. ಅರ್ಬನ್ ಬ್ಯಾಂಕ ಪ್ರಸಕ್ತ 14 ಶಾಖೆಗಳನ್ನು ಹೊಂದಿದೆ. ಮುಂದಿನ ದಿನಮಾನಗಳಲ್ಲಿ ಮತ್ತೆ ಹೊಸ ಶಾಖೆಗಳನ್ನು ತೆರೆಯಲಾಗುವದು.

ಪೂಜ್ಯರ, ಹಿರಿಯರ ಮಾರ್ಗದರ್ಶನದಲ್ಲಿ ಗ್ರಾಹಕರ ಸಹಕಾರದ ಮೂಲಕ ಬ್ಯಾಂಕಿನ ಅಭಿವೃದ್ಧಿಗಾಗಿ ಒಂದುಗೂಡಿ ಕೆಲಸ ಮಾಡುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕಿಗೆ ಅತಿ ಹೆಚ್ಚು ಅಂಕ ಪಡೆದ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಮತ್ತು ವಿಶೇಷ ಸಾಧಕರಿಗೆ ಸನ್ಮಾನಿಸುವ ಮೂಲಕ ಗೌರವಿಸಲಾಯಿತು.

ನಿರ್ದೇಶಕ ಕಿರಣ ಪಿಸಾಳ ಮಾತನಾಡಿ, ಅರ್ಬನ್ ಬ್ಯಾಂಕ ಅಭಿವೃದ್ಧಿ ಪಥ–'ದಲ್ಲಿ ಸಾಗುತ್ತಿದೆ ಎಂದರು. ವೇದಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಎಂ.ಎಂ. ಪಾಥ9ನಳ್ಳಿ, ನಿರ್ದೇಶಕರಾದ ಎಫ್. ಎ. ಬಾಗವಾನ, ಕೆ. ಜಿ. ಮಾಳಿ, ಡಿ. ಆರ್. ತೇಲಿ, ಫ್ಹಿ.ಐ.ಕಂಬಿ, ಎ.ಬಿ.ಮನಗೂಳಿ, ಎ.ಆರ್.ಶಿಂಧೆ, ಬಿ.ಜಿ.ಮಠಪತಿ, ಪಿ.ಡಿ.ಜನವಾಡ, ಎನ್.ಬಿ.ತಳವಾರ, ಸುನಂದಾ ಅರಕೇರಿ, ವೈಶಾಲಿ ಗೊಂದಿ, ಪ್ರಧಾನ ವ್ಯವಸ್ಥಾಪಕ ಎಸ್. ಆರ್. ತುಪ್ಪದ, ಸಹಾಯಕ ವ್ಯವಸ್ಥಾಪಕ ಎಸ್.ಎಸ್. ಹಲ್ಯಾಳ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

ನಿರ್ದೇಶಕರಾದ ಬಸವರಾಜ ಕಲೂತಿ ಸ್ವಾಗತಿಸಿದರು. ಶಾಖಾ ವ್ಯವಸ್ಥಾಪಕ ರಮೇಶ ಮರನೂರ ನಿರೂಪಿಸಿದರು. ಶಿವಾನಂದ ಪಟ್ಟಣಶೆಟ್ಟಿ ವಂದಿಸಿದರು.

# ರಾಷ್ಟ್ರಮಟ್ಟದಲ್ಲಿ ತೃತೀಯ ಸ್ಥಾನ ಪಡೆದು ಕಂಚಿನ ಪದಕ



**ಬಾಗಲಕೋಟೆ :** ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಸುವಾರ್ಡ್‌ದ ಖಗಿಎಅಖಿ'ಖ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಆಗಸ್ಟ್ 22 ರಿಂದ 24ರ ವರೆಗೆ ನಡೆದ 9ನೆಯ ರಾಷ್ಟ್ರೀಯ ಲಗೋರಿ ಚಾಂಪಿಯನಿಶಿಪ್‌ನಲ್ಲಿ ಕರ್ನಾಟಕರಾಜ್ಯವನ್ನುಪ್ರತಿನಿಧಿಸಿದಬ.ವಿ.ವಿಸಂಘದ ಬಿ.ಸಿ ಕಲಹಾಳ ಪ್ರೌಢಶಾಲೆಯ ಕಾಕನೂರ ಬಾಲಕ ಮತ್ತುಬಾಲಕಿಯರತಂಡರಾಷ್ಟ್ರಮಟ್ಟದಲ್ಲಿಮೂರನೇ ಸ್ಥಾನವನ್ನು ಪಡೆದು ಕಂಚಿನ ಪದಕವನ್ನು ಗಳಿಸಿದೆ. ರಾಷ್ಟ್ರ ಮಟ್ಟದಲ್ಲಿ ಮೂರನೇ ಸ್ಥಾನವನ್ನು ಪಡೆದು ಬಿ.ವಿ.ವಿ ಸಂಘದಕ್ಕೆ ಕೀರ್ತಿ ತಂದ 15 ಬಾಲಕಿಯರು ಹಾಗೂ 13 ಬಾಲಕರನ್ನು ಸೋಮವಾರ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಸನ್ಮಾನಿಸಿ ಗೌರವಿಸಿ ಮಾತನಾಡಿದ ಅವರು ಸಂಘದಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿ–ಕೆಗಳಿಗೆ ಆದ್ಯತೆ ನೀಡುತ್ತಾ ಬಂದಿದೆ, ಸಂಘದಲ್ಲಿ ಶಿಕ್ಷಣ ಪಡೆದ ಸಾವಿರಾರು ಜನ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ, ಈ ಮಕ್ಕಳಿಗೂ ಒಳ್ಳೆಯ ಭವಿಷ್ಯವಿದೆ, ಅವರಲ್ಲಿನ ಪ್ರತಿಭೆಯನ್ನು ಗುರುತಿಸಿ ಸಾಧನೆ ಮಾಡುವಂತೆ ಅವರಿಗೆ ಪ್ರೇರಕವಾಗಿರುವ ಶಿಕ್ಷಕರ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಮಹಾಂತೇಶ ಶೆಟ್ಟರ, ನಿರ್ದೇಶಕರಾದ ಅಪ್ಪು ಅಂಟಿನ ಪದ ನಿಮಿತ್ಯ ಕಾರ್ಯದರ್ಶಿಗಳಾದ ಕೆ.ಎಚ್.ಹೊಸೂರ. ರಾಜ್ಯ ಲಗೋರಿ ಸಂಸ್ಥೆಯ ಪದಾಧಿಕಾರಿಗಳಾದ ಅಶೋಕ ಮೋಕಾಸಿ ಸಂಗಮೇಶ ಲಾಯದಗುಂದಿ, ಅವಿನಾಶ ಹಿರೇಮಠ ಶಾಲೆಯ ಮುಖ್ಯ ಗುರುಗಳಾದ ವೈ ಎಸ್ ವಾಲಿಕಾರ,ದೈಹಿಕಶಿಕ್ಷಕರಾದಎಂಎಲ್‌ಸಂಕನಗೌಡರ ಬಾಲಕರ ತಂಡದ ವ್ಯವಸ್ಥಾಪಕರಾದ ಎಸ್. ಎಸ್. ಹದ್ಲಿ ಬಾಲಕಿಯರ ತಂಡದ ವ್ಯವಸ್ಥಾಪಕರಾದ ಶ್ರೀಮತಿ ಎಸ್ ವ್ಹಿ ಮಠಪತಿ ಹಾಗೂ ಶ್ರೀಮತಿ ಪ್ರೇಮಾ ನವಲಗುಂದ ಇವರು ಉಪಸ್ಥಿತರಿದ್ದರು.

# ಅಭಿವೃದ್ಧಿಗೆ ನೆರವಾಗಲಿ, ರಾಜಕೀಯ ಟೀಕೆ ಬೇಡ: ನಂದಿ ಸಕ್ಕರೆ ಅಧ್ಯಕ್ಷ ದೇಸಾಯಿ




**ಬಾಗಲಕೋಟೆ :** ಹಿಂದಿನ ಅವಧಿಯಲ್ಲಿ ನಡೆದ ಲೋಪಗಳಿಂದಾಗಿನಂದಿಸಹಕಾರಿ ಸಕ್ಕರೆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಅದನ್ನು ಸರಿಪಡಿಸಲು ಶೇರುಗಳನ್ನು ಸಂಗ್ರಹಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರು ರಾಜಕೀಯ ಟೀಕೆ ಮಾಡುವುದರ ಬದಲು ಕಾರ್ಖಾನೆಯ ಅಭಿವೃದ್ಧಿಗೆ ನೆರವಾಗಬೇಕೆಂದು ಕಾರ್ಖಾನೆ ಅಧ್ಯಕ್ಷ ಕುಮಾರ ಚಂದ್ರಕಾಂತ ದೇಸಾಯಿ ಕೋ–ರಿದ್ದಾರೆ.

ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಮುರುಗೇಶ್ ನಿರಾಣಿ ಕಾರ್ಖಾನೆಯ ವಿಷಯದಲ್ಲಿ ಮಾಡಿರುವ ಆರೋಪಗಳಿಗೆ ಉತ್ತರಿಸಿದರು. 2017ರಲ್ಲಿ ನಮ್ಮ ಅವಧಿ ಮುಗಿಯುವ ಹೊತ್ತಿಗೆ ಉತ್ತಮ ಗುಣಮಟ್ಟದ ಬಾಯ್ಲರ್ ಖರೀದಿಗೆ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ ನಂತರದ ಆಡಳಿತದಲ್ಲಿ ಶಶಿಕಾಂತ ಪಾಟೀಲ ಅವರು ನಾವು ಬುಕ್ ಮಾಡಿದ್ದ ಬಾಯ್ಲರ್ ಬಿಟ್ಟು ಬೇರೆ ಗುಣಮಟ್ಟ ಕಡಿಮೆ ಇರುವ ಬಾಯ್ಲರ್ ಖರೀದಿಸಿದರು. ಈ ವಿಷಯ ಸೇರಿದಂತೆ ಹಲವು ಹಣಕಾಸು ಅವ್ಯವಹಾರಗಳ ಬಗ್ಗೆ ಸಹಕಾರಿ ಕಾಯ್ದೆಯ 64ರ ಅಡಿ ತನಿಖೆ ಆದೇಶವಾಗಿತ್ತು. ಅದಕ್ಕೆ ತಡೆಯಾಜ್ಞೆ ತರಲಾಗಿದ್ದರೂ ಅದನ್ನು ತೆರವುಗೊಳಿಸಲು ನಾನು ನ್ಯಾಯಾಲಯದಲ್ಲಿ ಹೋರಾಟ ನಡೆಸಿದ್ದೇನೆ. ಈ ಪ್ರಕರಣದಲ್ಲಿ ಸೆಪ್ಟೆಂಬರ್ 1ರಂದು 29 ಜನರು ವಿಚಾರಣೆಗೆ ಹಾಜರಾಗಲಿದ್ದಾರೆ ಎಂದು ಹೇಳಿದರು.

ಮುರುಗೇಶ್ ನಿರಾಣಿ ಅವರು "ಕಾರ್ಖಾನೆಯಲ್ಲಿ ಬಾಯ್ಲರ್ ಖರೀದಿಗೆ 100 ಕೋಟಿ ರೂ. ಸಂಗ್ರಹಿಸಲಾಗುತ್ತಿದೆ" ಎಂದು ದೂರಿದ್ದಾರೆ. ಆದರೆ, ಅವರ ಅವಧಿಯಲ್ಲಿ ಕಾರ್ಖಾನೆಯ ಸಾಲ 520 ಕೋಟಿಗೆ ಏರಿಕೆಯಾಯಿತು. ನಾನು ಎರಡು ವರ್ಷದ ಅವಧಿಯಲ್ಲಿ 11 ಲಕ್ಷ ಟನ್ ಕ್ರಶಿಂಗ್ ನಡೆಸಿ, 70 ಕೋಟಿ ರೂ.ಗಳ ಸಾಲವನ್ನು ಕಡಿಮೆ ಮಾಡಿದ್ದೇನೆ. ಷೇರುಗಳ ಮೂಲಕ 50 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿ ಹೊಂದಿದ್ದೇವೆ. ಅಂದಾಜು 39 ಕೋಟಿ ರೂ. ಬಾಯ್ಲರ್ಗೆ ಖರ್ಚಾಗಲಿದೆ ಎಂದು ವಿವ–ರಿಸಿದರು.

ಅವರು ಮುಂದುವರಿದು, "2021ರಲ್ಲೇ ವಿಧಾನಸಭೆಯಲ್ಲಿ ಮುರುಗೇಶ್ ನಿರಾಣಿ ಅವರು ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ಮಾತಾಡಿದ್ದರು. ಇಂದಿಗೂ ಅವರುನಂದಿಸಕ್ಕರೆಕಾರ್ಖಾನೆಯ ಸದಸ್ಯರಾಗಿರುವುದರಿಂದ ತಮ್ಮದೇ ಕಾರ್ಖಾನೆಯಂತೆ ಅಭಿವೃದ್ಧಿಗೆ ಕೈಜೋಡಿಸಬೇಕು. ಆದರೆ ಶೇರುದಾರರನ್ನು ದಿಕ್ಕುತಪ್ಪಿಸುವ ಕೆಲಸ ಬೇಡ" ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಶೋಕ ಲೆಂಕಣ್ಣವರ, ರಮೇಶ ಬಗಲಿ, ಸೇರಿದಂತೆ ಇತರರು ಇದ್ದರು.

# ಅನ್ನದಾಸೋಹ ಸೇವೆ ಪ್ರಶಂಸನೀಯ: ಜಿ.ಎಸ್. ಅಮ್ಮಣಗಿ

**ರಬಕವಿ :** ಆಗಸ್ಟ್ 23 ರಂದು ಬೆನಕನ ಅಮಾವಾಸ್ಯೆ ನಿಮಿತ್ಯ ಇಲ್ಲಿನ ದಾನಮ್ಮ ದೇವಿ ದೇವಸ್ಥಾನದಲ್ಲಿ ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ಹಾಗೂ ದಾನಮ್ಮದೇವಿ ಟ್ರಸ್ಟ್ ಸಹಯೋಗದಲ್ಲಿ 30 ನೆಯ ಅನ್ನದಾಸೋಹ ಸೇವೆ ಜರುಗಿತು.

ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಜಿ. ಎಸ್. ಅಮ್ಮಣಗಿ ಅವರು ಆಗಮಿಸಿ, ಅನ್ನದಾಸೋಹ ಸೇವೆ ನಿರಂತರವಾಗಿ ಅಮಾವಾಸ್ಯೆಯಂದು ನಡೆಸುತ್ತಾ ಬಂದಿರುವ ಡಿ.ಕೆ ಕೊಟ್ರಶೆಟ್ಟಿ ಫೌಂಡೇಶನ್ ಕಾರ್ಯವನ್ನು ಮನಸಾರೆ ಪ್ರಶಂಶಿಸಿದರು. ದಾನಮ್ಮ ದೇವಿ ಅವ–ರಿಗೆ ಮತ್ತಷ್ಟು ಶಕ್ತಿ ನೀಡಲಿ ಎಂದರು.

ಗಂಗಯ್ಯ ಹಿರೇಮಠ ದಾನಗಳಲ್ಲಿ ಅನ್ನದಾನ ಶ್ರೇಷ್ಠವಾದದ್ದು ಎಂದರು.

ಜಿ.ಎಸ್. ಅಮ್ಮಣಗಿ, ರಾಜು ಟೆಂಗಿನಕಾಯಿ, ಸಂತೋಷ ಆಲಗೂರ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿವಜಾತ ಜಿ. ಉಮದಿ, ಬಸವರಾಜ ದಲಾಲ, ಶಂಕರ ಮಲ್ಲಣ್ಣವರ, ಮಹದೇವ ನಂದಯ್ಯಗೋಳ ಉಪಸ್ಥಿತರಿದ್ದರು.

ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ನಿನ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಎಂ.ಎಸ್. ಗಡೆನ್ನವರ, ವಿ. ಎಸ್. ಹಲಕುರ್ಕಿ ಹಾಗೂ ಭಾರತ ಗ್ಯಾಸ್ ಸಿಬ್ಬಂದಿ ಭಾಗವಹಿಸಿದ್ದರು.




## ಅಪರಿಚಿತ ಶವ ಪತ್ತೆ

**ಬಾಗಲಕೋಟೆ :** ವಿಜಯಪುರ–ಜುಮನಾಳ ರೈಲ್ವೆ ನಿಲ್ದಾಣಗಳ ಮಧ್ಯೆ (ಕಿ.ಮಿ. 187/700–600) ಸುಮಾರು 40 ವರ್ಷದ ಅಪರಿಚಿತ ಗಂಡಸರ ಶವ ಪತ್ತೆಯಾಗಿದೆ. ಈ ಕುರಿತು ರೈಲ್ವೆ ಪೊಲೀಸ್ ಠಾಣೆ ವಿಜಯಪುರದಲ್ಲಿ ಯುಡಿಆರ್ ನಂ.27/2025, ಕಲಂ 194 ಬಿ ಎನ್‌ಎಸ್‌ಎಸ್ ಅಕ್ಸ–2023ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ಎತ್ತರ 5.5 ಅಡಿ, ದುಂಡುಮುಖ, ದಪ್ಪ ಮೂಗು, ಗೋಧಿ ಮೈಬಣ್ಣ, ಗಡ್ಡ–ಮಿಸೆ ಇರುತ್ತದೆ. ತಲೆಯಲ್ಲಿ 2 ಇಂಚು ಕಪ್ಪು ಕೂದಲು. ಗಿಳಿ ಹಸಿರು ಬಣ್ಣದ ಟೀ–ಶರ್ಟ್, ನೀಲಿ ಜೀನ್ಸ್, ಚಾಕಲೇಟ್ ಬಣ್ಣದ ಬೆಲ್ಟ್, ಕೇಸರಿ ಊಡದಾರ ಧರಿಸಿದ್ದಾನೆ. ಗುರುತಿನ ಚೀಟಿ ಅಥವಾ ನಗದು ಸಿಕ್ಕಿಲ್ಲ. ಮೃತನ ಹೆಸರು–ವಿಳಾಸ ಪತ್ತೆ ಹಚ್ಚಿದವರು ರೈಲ್ವೆ ಪೊಲೀಸ್ ಠಾಣೆ ವಿಜಯಪುರ (ದೂರವಾಣಿ: 08352–250883, e-mail: bijapurrly@ksp.gov.in) ಅಥವಾ ರೈಲ್ವೆ ಕಂಟ್ರೋಲ್ ರೂಂ (080–22871291, dcrly@ksp.gov.in) ಸಂಪರ್ಕಿಸಲು ಕೋರಲಾಗಿದೆ.

# ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸೋಣ









ಪ್ರತಿವರ್ಷದಂತೆ ಈ ವರ್ಷವು ಶ್ರದ್ಧೆ ಮತ್ತು ಭಕ್ತಿಯಿಂದ ಭಾದ್ರಪದ ಮಾಸಾ ಶುಕ್ಲಪಕ್ಷ ಚತುರ್ಥಿ ಎಂದು ಗಣೇಶ ಹಬ್ಬವನ್ನು ಆಚ–ರಿಸಲಾಗುತ್ತಿದ್ದು, ವಿದ್ಯೆ ಮತ್ತು ಜ್ಞಾನದ ಅಧಿಪತಿ ಸಂಪತ್ತು ಮತ್ತು ಅದೃಷ್ಟದ ಅಧಿನಾಯಕನಾದ ಮೋದಕ ಪ್ರಿಯ ಗಣೇಶನ ಜನನವನ್ನು ಸಾರುವ ಈ ಹಬ್ಬ ಹಿಂದುಗಳು ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜಿಸುತ್ತಾ ವಿನಾಯಕನ ಆರಾಧನೆ ಮಾಡುತ್ತಾರೆ. ಮಹಾರಾಷ್ಟ್ರದಲ್ಲಿ ಇದನ್ನು ವಿಶೇಷ ರೀತಿಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶಿವ ಪಾರ್ವತಿಯರ ಮಗನಾದ ಗಣೇಶನಿಗೆ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ. ಏಕದಂತ, ಮಂಗಲಮೂರ್ತಿ, ವಿಘ್ನೇಶ್ವರ, ಲಂಭೋದರ, ವಿನಾಯಕ, ಗಜಮುಖ, ಮುಷಿಕ ವಾಹನ ಸೇರಿದಂತೆ ಇತರೆ ಹಲವಾರು ಹೆಸರುಗಳಿವೆ.

ಗಣೇಶ ಹಬ್ಬವನ್ನು ಮರಾಠರು ತಮ್ಮ ಆಳ್ವಿಕೆಯಲ್ಲಿ ಉತ್ತುಂಗದ ಪ್ರಚಾರಕ್ಕೆ ತಂದರು. ಮರಾಠ ದೊರೆ ಛತ್ರಪತಿ ಶಿವಾಜಿ ಮಹಾರಾಜ ಈ ಹಬ್ಬವನ್ನು ಆಚರಣೆಗೆ ತಂದ ಎಂದು ಇತಿಹಾಸಗಳು ಹೇಳುತ್ತವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮನೆ ಮನೆಗಳ ಹಬ್ಬವಾಗಿದ್ದ ಗಣೇಶ ಚತುರ್ಥಿಯನ್ನು ಬಾಲ ಗಂಗಾಧರ ತಿಲಕರು ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊರಗೆಡುವ ಸಲುವಾಗಿ ಈ ಹಬ್ಬವನ್ನು ಪ್ರಚುರಗೊಳಿಸಿದರು. 1892 ರಲ್ಲಿ ಮಹಾರಾಷ್ಟ್ರದಲ್ಲಿ ಬಾವ ಸಾಹೇಬ್ ಲಕ್ಷ್ಮಣ ಜವೇಲ್ ಅವರು ಪ್ರಥಮವಾಗಿ ಸಾರ್ವಜನಿಕ ಗಣೇಶ ಉತ್ಸವವನ್ನು ಆಚರಣೆ ಮಾಡಿದರು.


ಈ ಬಾರಿಯೂ ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕಚತುರ್ಥಿ ಹಬ್ಬವು ಸಮೀಪಿಸುತ್ತಿದ್ದು, ಈ ಸಂದರ್ಭದಲ್ಲಿ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿ.ಒ.ಪಿ) ಮತ್ತು ಬಣ್ಣದ ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸಿದ ನಂತರ ಕೆರೆ, ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲಮೂಲಗಳಲ್ಲಿ ವಿಸರ್ಜಿಸುವುದು ಸಂಪ್ರದಾಯವಾಗಿದ್ದು,ಇದರಿಂದಾಗಿನೈಸರ್ಗಿಕ ಜಲಮೂಲಗಳು ಕಲುಷಿತಗೊಂಡು ಇವುಗಳ ಭೌತಿಕ ಹಾಗೂ ರಾಸಾಯನಿಕ ಗುಣಗಳು ಮಾರ್ಪಟ್ಟು ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದಲ್ಲದೇ ಪ್ರಾಣಿ, ಪಕ್ಷಿ ಹಾಗೂ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ. ಅಲ್ಲದೇ ಸಾರ್ವಜನಿಕರ ಆರೋಗ್ಯಕ್ಕೂ ಹಾನಿ ಉಂಟಾಗುತ್ತದೆ. ಆದ್ದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಹಬ್ಬದ ಆಚರಣೆಯಿಂದ ನೈಸರ್ಗಿಕ ಜಲ ಮೂಲಗಳನ್ನು ರಕ್ಷಿಸುವ ನಿಟ್ಟಿನಲ್ಲಿ 2016ರ ಜುಲೈ 20ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ವಿಗ್ರಹಗಳನ್ನು ಇನ್ಮುಂದೆ ರಾಜ್ಯದ ಯಾವುದೇ ಕೆರೆ ಮತ್ತು ಇತರೇ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು ಪರಿಸರ ಸ್ನೇಹಿ ಗೌರಿಗಣೇಶ ಹಬ್ಬ ಆಚರಿಸಿ ನೈಸರ್ಗಿಕ ಜಲ ಸಂಪನ್ಮೂಲಗಳನ್ನು ಸಂರಕ್ಷಿಸಬೇಕಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಪಿ.ಒ.ಪಿ ಯಿಂದ ಗಣೇಶ ಮೂರ್ತಿ ತಯಾರಿಸಿ, ಮಾರಾಟ ಹಾಗೂ ವಿಸರ್ಜನೆಗೆ ಸಂಬಂಧಿಸಿದಂತೆ ದಿನಾಂಕ: 12.05.2020 ರಂದು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ,ನೀರಿನಮೂಲಗಳನ್ನುಸಂರಕ್ಷಿಸುವ ದೃಷ್ಟಿಯಿಂದ ಪಿಒಪಿ ಮೂರ್ತಿಗಳ ತಯಾರಿಸಿ, ಮಾರಾಟ ಹಾಗೂ ವಿಸರ್ಜನೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.

ಜಲ(ಮಾಲಿನ್ಯನಿಯಂತ್ರಣಮತ್ತುನಿವಾರಣಾ) ಕಾಯ್ದೆ, 1974ರ ಕಲಂ 33(ಎ) ಅಡಿಯಲ್ಲಿ ಈ ರೀತಿಯ ವಿಗ್ರಹಗಳ ಉತ್ಪಾದನಾ ಘಟಕವನ್ನು ಮುಚ್ಚುವ ಹಾಗೂ ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶ ಇರುತ್ತದೆ. ಈ ವಿಗ್ರಹಗಳನ್ನುಯಾವುದೇನೀರಿನಮೂಲಗಳಿಗೆ ವಿಸರ್ಜನೆ ಮಾಡುವುದು ಕಾಯ್ದೆಯ ಕಲಂ 24ರ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಈ ಕಾಯ್ದೆಯ ಕಲಂ 41 ಹಾಗೂ 43ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಅಪರಾಧಕ್ಕೆ ದಂಡದೊಂದಿಗೆ ಕನಿಷ್ಠ ಒಂದೂವರೆ ವರ್ಷ ಹಾಗೂ ಗರಿಷ್ಠ ಆರು ವರ್ಷಗಳ ಕಾರಾಗೃಹವಾಸದ ಜೊತೆಗೆ ಈ ಉಲ್ಲಂಘನೆಗೆ ಪರಿಸರ (ಸಂರಕ್ಷಣಾ) ಕಾಯ್ದೆ 1986 ರಡಿಯಲ್ಲಿಯೂ ಸಹ ಕ್ರಮ ಜರುಗಿಸಬಹುದಾಗಿರುತ್ತದೆ. ಅಂತಹ ಉದ್ದಿಮೆ ಅಥವಾ ಉತ್ಪಾದನಾ ಘಟಕವನ್ನು ಪರಿಸರ (ಸಂರಕ್ಷಣಾ) ಕಾಯ್ದೆ, 1986 ಕಲಂ 5 ರಡಿಯಲ್ಲಿ ಮುಚ್ಚುವ ಹಾಗೂ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ಈ ಕಾಯ್ದೆಯ ಉಲ್ಲಂಘನೆ ಕಲಂ 15ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು, ಅದಕ್ಕೆ ಗರಿಷ್ಠ ಒಂದು ಲಕ್ಷ ರೂಪಾಯಿಗಳ ದಂಡದೊಂದಿಗೆ ಗ–ರಿಷ್ಠ 5 ವರ್ಷದ ಕಾರಾಗೃಹವಾಸದ ಶಿಕ್ಷೆಗೆ ಒಳಪಡಬೇಕಾಗುತ್ತದೆ.

ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಮಣ್ಣಿನಿಂದ ತೈಯಾರಿಸಿದ ಗಣಪತಿಗಳನ್ನು ನಮ್ಮ ಮನೆಗಳಲ್ಲಿ ಪ್ರತಿಷ್ಠಾಪನೆ ಮಾಡಿ ಆಚ–'ರಿಸೋಣ. ರಾಸಾಯನಿಕ ಬಣ್ಣಗಳಿಂದ ತೈಯಾರಿಸಿದ ಗಣಪತಿಗಳನ್ನು ಬಳಸಿದರೆ ಅವುಗಳನ್ನು ನದಿ, ಭಾವಿ, ಹಳ್ಳ ಮತ್ತು ಕೆರೆ ಇತ್ಯಾದಿಗಳಲ್ಲಿ ವಿಸರ್ಜಿಸಿದಾಗ ಈ ವಿಗ್ರಹಗಳ ಮೂಲವಸ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಇದರ ರಾಸಾಯನಿಕ ಮೂಲ ಹೆಸರು "ಕ್ಯಾಲ್ಸಿಯಮ್ ಸಲ್ಫೇಟ್ ಹೆಮಿಹೈಡ್ರೇಟ್" ಇದರಿಂದ ತೈಯಾರಿಸಿದ ವಿಗ್ರಹಗಳನ್ನು ನೀರಿನಲ್ಲಿ ವಿಸರ್ಜಿಸಿದಾಗ, ಅವುಗಳು ನೀರಿನಲ್ಲಿ ನಿಧಾನವಾಗಿ ಕರಗುವುದರಿಂದ ನೀರಿನಲ್ಲಿನ ಕರಗಿದ ಆಮ್ಲಜನಕದ ಪ್ರಮಾಣದಲ್ಲಿ ತೀವ್ರ ಇಳಿಕೆಯಾಗುತ್ತೆ ಹಾಗೂ ಅದರಲ್ಲಿ ಕ್ಯಾಲ್ಸಿಯಂ ಅಂಶ ಇರುವುದರಿಂದ ನೀರಿನ ಶಾಶ್ವತ ಗಡಸುತನ ಸಹ ಹೆಚ್ಚಾಗುತ್ತದೆ. ವಿಗ್ರಹಗಳಲ್ಲಿ ಉಪಯೋಗಿಸಲಾದ ರಾಸಾಯನಿಕ ಯುಕ್ತ ಬಣ್ಣಗಳಲ್ಲಿರುವ ಭಾರಲೋಹಗಳಾದ ಮರ್ಕ್ಯುರಿ, ಆರ್ಸೆನಿಕ್, ಲೆಡ್, ಕ್ರೋಮಿಯಂ, ತಾಮ್ರ, ಕ್ಯಾಡ್ಮಿಯಂ, ಕೋಬಾಲ್ಟ್, ಸತು ಇತ್ಯಾದಿ ಹಾನಿಕಾರಕ ವಸ್ತುಗಳು ಕ್ರಮೇಣ ನೀರಿನಲ್ಲಿ ಬೆರೆತು ನೀರಿನ ಮೂಲಗಳು ಕುಲುಷಿತವಾಗುತ್ತವೆ. ಅಲ್ಲದೆ, ನೀರಿನಲ್ಲಿನ ವಿವಿಧ ಜೀವಿಗಳಾದ ಮೀನುಗಳು ಹಾಗು ಇತರೆ ಜಲಚರಗಳು ಸಾವನ್ನಪ್ಪುವ ಸಂಭವವಿರುತ್ತದೆ. ಈ ನೀರನ್ನು ಬಳಸುವಂತಹ ಸುತ್ತಮುತ್ತಲಿನ ಜನರು ಹಾಗು ಜಾನುವಾರುಗಳಿಗೆ ವಿವಿಧ ರೀತಿಯ ಕಾಯಿಲೆಗಳು ಮತ್ತು ಕ್ಯಾನ್ಸರ್‌ಕಾರಕವಾಗುವಂತಹ ಇತರೆ ರೋಗರುಜಿನಗಳು ಬರುವ ಸಾಧ್ಯತೆಯಿರುತ್ತವೆ ಎಂದು ಹಲವಾರು ವಿಶ್ಲೇಷಣೆ ಮತ್ತು ಅಧ್ಯಯನಗಳು ಹೇಳುತ್ತವೆ.

ಗಣೇಶ ಆಚರಣೆ ಸಂದರ್ಭದಲ್ಲಿ ಹೆಚ್ಚಿನ ಪಟಾಕಿಗಳನ್ನು ಸಿಡಿಸದಂತೆ ನೋಡಿಕೊಳ್ಳಿ. ಇದರಿಂದ ಅಲ್ಲಿ ಸೇರಿರುವ ಜನರ ಕಣ್ಣಿಗೆ ಹಾನಿಯುಂಟಾಗುವ ಸಂಭವವಿರುತ್ತದೆ ಮತ್ತು ಶಬ್ಧ ಮಾಲಿನ್ಯದ ಜೊತೆಗೆ ಹೆಚ್ಚಿನ ಹೊಗೆ ಹರಡಿ ಪರಿಸರ ಮಾಲಿನ್ಯವನ್ನು ಉಂಟುಮಾಡುತ್ತದೆ. ಗಣೇಶ ಪ್ರತಿಷ್ಠಾಪನೆ ಸ್ಥಳ ಹಾಗೂ ವಿಸರ್ಜನೆ ಮಾಹಿತಿಯನ್ನು ಗಣೇಶ ಮಂಡಳಿಯ ಸದಸ್ಯರು ತಮ್ಮ ಹತ್ತಿರದ ಪೊಲೀಸ್ ಠಾಣೆಗೆ ನೀಡಬೇಕು. ಇದರಿಂದ ಗಣೇಶ ವಿಸರ್ಜನೆ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳನ್ನು ನಡೆಯದಂತೆ ಪೊಲೀಸರು ಮತ್ತು ಗೃಹ ರಕ್ಷಕ ದಳದವರು ಮುಂಜಾಗ್ರತೆ ವಹಿಸುತ್ತಾರೆ. ಗಣೇಶ ಹಬ್ಬದ ಆಚರಣೆ ಕು–ರಿತು ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಹೊರಡಿಸುವ ಮಾರ್ಗ ಸೂಚಿಗಳನ್ನು ಎಲ್ಲರೂ ಪಾಲನೆ ಮಾಡುತ್ತ ಪರಸ್ಪರ ಸ್ನೇಹ, ಸೌಹಾರ್ದತೆ ಮತ್ತು ಶಾಂತಿಯುವಾಗಿ ಈ ವರ್ಷದ ಗಣೇಶ ಹಬ್ಬವನ್ನು ಸಂಭ್ರಮದಿಂದ ಆಚರಿಸುವ ಮೂಲಕ ಮೋದಕಪ್ರೀಯ ಗಣೇಶನ ಪ್ರೀತಿಗೆ ನಾವೆಲ್ಲರೂ ಪಾತ್ರರಾಗೋಣ.



ಲೇಖನ : ಡಾ. ಸುರೇಶ ಜಿ.
ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ.

# ಖಾದಿ ಉತ್ಸವ-2025ರ ರಾಜ್ಯ ಮಟ್ಟದ ಖಾದಿ, ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಚಾಲನೆ

## ಖಾದಿ ಉತ್ಪಾದನೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ರಿಯಾಯತಿ-ಬಸವನಗೌಡ ತುರುವಿಹಾಳ







**ಕೊಪ್ಪಳ :** ಖಾದಿ ಉತ್ಪಾದನೆಯನ್ನು ಉತ್ತೇಜಿಸುವಸಲುವಾಗಿಕರ್ನಾಟಕಸರ್ಕಾರವು ಪ್ರತಿ ವರ್ಷ ಖಾದಿ ಬಟ್ಟೆಗಳಿಗೆ ಶೇ.35 ರಷ್ಟು ಹಾಗೂ ರೇಷ್ಮೆ ಖಾದಿ ಬಟ್ಟೆಗಳಿಗೆ ಶೇ.25 ರಷ್ಟು ರಿಯಾಯಿತಿಯನ್ನು ನೀಡುತ್ತಿದ್ದು, ಇದರಿಂದ ಖಾದಿ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಸಹಕಾರಿಯಾಗಿದೆ ಎಂದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ ಹೇಳಿದರು.

ಅವರು ಭಾನುವಾರ ಕೊಪ್ಪಳ ನಗರದ ಮುಸ್ಲಿಂ ಶಾದಿಮಹಲ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೊಪ್ಪಳ ಹಾಗೂ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 24 ರಿಂದ ಸಪ್ಟೆಂಬರ್ 2ರ ವರೆಗೆ ಹಮ್ಮಿಕೊಳ್ಳಲಾದ ಖಾದಿ ಉತ್ಸವ-2025ರ ರಾಜ್ಯ ಮಟ್ಟದ ಖಾದಿ, ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ರಿಬ್ಬನ್ ಕತ್ತರಿಸುವುದರ ಮೂಲಕ ಚಾಲನೆ ನೀಡಿ, ನಂತರ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಕರ್ನಾಟಕ ರಾಜ್ಯದಲ್ಲಿ ಖಾದಿ ಉತ್ಪಾದನೆಗೆ ಒಂದು ಪ್ರಮುಖ ಇತಿಹಾಸವಿದ್ದು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸ್ವದೇಶಿ ಚಳುವಳಿಯ ಪ್ರತೀಕವಾಗಿ ಖಾದಿ ಪ್ರತಿನಿಧಿಸುತ್ತದೆ ಎಂದರೆ ತಪ್ಪಿಲ್ಲ. ಖಾದಿ ಕೇವಲ ಬಟ್ಟೆ ಮಾತ್ರವಲ್ಲ ಅದು ನಮ್ಮ ಸ್ವಾಭಿಮಾನ, ಸ್ವಾವಲಂಬನೆ ಮತ್ತು ಪರಿಸರ ಜೀವನ ಶೈಲಿಯ ಪ್ರತೀಕಕವು ಹೌದು. ಖಾದಿ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಪುನರ್ಜೀನಗೊಳಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು 1957 ರಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಸ್ಥಾಪಿಸಿರುತ್ತದೆ. ಖಾದಿ ಮಂಡಳಿಯ ಕಳೆದ 65 ವರ್ಷಗಳಿಗೂ ಮೇಲ್ಪಟ್ಟು ಖಾದಿ ಕ್ಷೇತ್ರವಾದ ಹತ್ತಿ, ರೇಷ್ಮೆ ಹಾಗೂ ಉಣ್ಣೆ ನೂಲಿನಿಂದ ಕೈ ಚರಕದ ಮೂಲಕ ನೂಲು ತೆಗೆದು ಸ್ಥಳೀಯ ಕಸುಬುದಾರರಿಂದಲೇ ಹತ್ತಿ ಬಟ್ಟೆ ಹಾಗೂ ಉಣ್ಣೆ ವಸ್ತ್ರಗಳನ್ನು ತಯಾರಿಸಲು ಉತ್ತೇಜಿಸುತ್ತಾ ಬಂದಿರುವುದರಿಂದ ಪ್ರಸ್ತುತ ಕರ್ನಾಟಕದಲ್ಲಿ 175 ಕ್ಕೂ ಹೆಚ್ಚು ಸಂಘ-ಸಂಸ್ಥೆಗಳು ಖಾದಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರವುದು ಪುಷ್ಠೀಕರಿಸುತ್ತದೆ ಎಂದರು.

ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರದಲ್ಲಿ ರಾಷ್ಟ್ರ ಮಟ್ಟದಲ್ಲಿ ರೂ.1.70 ಲಕ್ಷ ಕೋಟಿಗಗೂ ಹೆಚ್ಚು ವಹಿವಾಟುನಡೆದಿರುವುದರಜೊತೆಗೆಸುಮಾರು 1.94 ಕೋಟಿ ಉದ್ಯೋಗಾವಕಾಶವನ್ನು ಸೃಷ್ಠಿರುವುದು ಹೆಮ್ಮೆಯ ವಿಷಯ. ಅದೇ ರೀತಿ ಕರ್ನಾಟಕದಲ್ಲಿ ರೂ. 650 ಕೋಟಿಗೂ ಮಿಗಿಲಾದ ವಹಿವಾಟಿನೊಂದಿಗೆ 21,000 ಕ್ಕೂ ಹೆಚ್ಚು ಉದ್ಯೋಗಳನ್ನು ಸೃಷ್ಟಿಸಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಈ ವಸ್ತು ಪ್ರದರ್ಶನಮತ್ತುಮಾರಾಟಮೇಳದಭಾಗವಾಗಿ ಇಂದು ಕೊಪ್ಪಳ ಜಿಲ್ಲೆಯಲ್ಲಿ "ಖಾದಿ ಉತ್ಸವ -2025" ಹೆಸರಿನಲ್ಲಿ ಖಾದಿ ವಸ್ತು ಪ್ರದರ್ಶನ ಮಾರಾಟ ಮೇಳವನ್ನು ಉದ್ಘಾಟಿಸಲು ಹೆಮ್ಮೆ ಎನಿಸುತ್ತಿದೆ. ಮುಂದಿನ 3 ರಿಂದ 4 ತಿಂಗಳೊಳಗೆ ರಾಜ್ಯದ ಇನ್ನೂ ವಿವಿಧ 6 ಜಿಲ್ಲೆಗಳಲ್ಲಿ ಖಾದಿ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗುವುದು. ಕೊಪ್ಪಳ ನಗರದ ಶಾದಿಮಹಲ್‌ನಲ್ಲಿಇಂದಿನಿಂದ10ದಿನಗಳಕಾಲ ನಡೆಯುವ ಈ ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನಕ್ಕಾಗಿ ರಾಜ್ಯದ ವಿವಿಧ ಭಾಗಗಳಿಂದ ಹಾಗೂ ವಿವಿಧ ರಾಜ್ಯಗಳಿಂದಲೂ ಪ್ರದರ್ಶಕರು ಬಂದು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುತ್ತಿದೆ ಎಂದು ಹೇಳಿದರು.

ಈಗಾಗಲೇ ಕೋಲಾರ ಮತ್ತು ದಾವಣಗೇರೆಯಲ್ಲಿ ವಸ್ತು ಪ್ರದರ್ಶನವವನ್ನು ಏರ್ಪಡಿಸಿದ್ದು, ಮುಂದಿನ ದಿನಗಳಿಗೆ ಗ್ರಾಹಕರ ಬೇಡಿಗೆ ಮತ್ತು ಖಾದಿ ಗ್ರಾಮೋದ್ಯೋಗ ಚಟುವಟಿಕೆಗಳ ಉತ್ಪಾದಕರ ಬೇಡಿಕೆಯನ್ನು ಆಧರಿಸಿ ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚು ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಮಾಡಲು ಪ್ರಯತ್ನಿಸುವ ಆಶಯದೊಂದಿಗೆ ಮುಂದಿನ 10 ದಿನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಾಗೂ ಮುಂದಿನ 2 ತಿಂಗಳಲ್ಲಿ ಆಯೋಜನೆಯಾಗಲಿರುವ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಎಲ್ಲಾ ಖಾದಿ ಉತ್ಪಾದಕರು ಮತ್ತು ಖಾದಿ ಗ್ರಾಮೋದ್ಯೋಗ ಉತ್ಪಾದಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಲಾಭವನ್ನು ಪಡೆದುಕೊಳ್ಳಬೇಕು. ಈ "ಖಾದಿ ಉತ್ಸವ -2025" ಕಾರ್ಯಕ್ರಮವು ಯಶಸ್ವಿಯಾಗಲೆಂದು ಆಶಿಸುತ್ತೇವೆ ಎಂದರು.

ರಾ.ಬ.ಕೊ.ವಿ ಹಾಲು ಉತ್ಪಾದಕರ ಸಹಕಾರ ಸಂಘದಅಧ್ಯಕ್ಷರುಹಾಗೂಕೊಪ್ಪಳಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ರಾಜ್ಯ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಕೊಪ್ಪಳದಲ್ಲಿ ಆಯೋಜನೆ ಮಾಡಿರುವುದು ತುಂಬಾ ಸಂತೋಷ ತಂದಿದೆ. ಬಸನಗೌಡ ತುರುವಿಹಾಳ ಅವರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾದ ಬಳಿಕ ಅನೇಕ ಕಡೆಗಳಲ್ಲಿ ಈ ರೀತಿ ವಸ್ತು ಪ್ರದರ್ಶನಗಳನ್ನು ಮಾಡುತ್ತಾ ಬಂದಿದ್ದಾರೆ. ಯಾರು ಇವತ್ತಿನವರೆಗೂ ಕೈಯಲ್ಲಿ ಬಟ್ಟೆಗಳನ್ನು ನೇಯ್ದು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಅವರಿಗೆ ಈ ಇಲಾಖೆ ಪ್ರೋತ್ಸಾಹ ಕೊಡಬೇಕು. ನಮ್ಮ ಕೊಪ್ಪಳದ ಭಾಗ್ಯನಗರ ಮತ್ತು ಕಿನ್ನಾಳನಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಕೈ ಮಗ್ಗದಿಂದ ಬಟ್ಟೆಗಳನ್ನು ನೇಯುಯವಂತ ಕೆಲಸ ಮಾಡುತ್ತಿದ್ದಾರೆ. ಇಲಕಲ್ಲ ಸೀರೆ, ಶಾಲುಗಳು, ಯಾವುದೇ ಬಟ್ಟೆ ವಸ್ತುಗಳನ್ನು ಕೈಯಲ್ಲಿ ನೈಯ್ದು ತಯಾರಿಸುವ ಕೆಲಸಗಾರರಿಗೆ ಸರ್ಕಾರ ಹೆಚ್ಚಿನ ಸಹಾಯ ಮಾಡಿದರೆ ಅವರ ಬದುಕು ಹಸನಾಗಲಿಕ್ಕೆ ಸಾಧ್ಯ ಆಗುತ್ತದೆ. ಯಾಕೆಂದರೆ ಈ ವಸ್ತು ಪ್ರದರ್ಶನದಲ್ಲಿ ನಾವು ಇಂದು ನೋಡಿದೇವು ಜಮ್ಮು ಕಾಶ್ಮೀರದ ಶ್ರೀನಗರದಿಂದ ಬಂದು ಈ ಒಂದು ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

ಅವರಿಗೆ ಇಂತಹ ಮಾರಾಟ ಮೇಳಗಳು ಸಹಾಯಕವಾಗಿವೆ. ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯವರು ಎಲ್ಲರನ್ನೂ ಒಟ್ಟುಗೂಡಿಸಿ ಮಾರ್ಕೆಟಿಂಗ್ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

ಅದು ಬಹಳ ಒಳ್ಳೆಯ ಕೆಲಸ. ಇದರಿಂದ ಮಾರಾಟಗಾರರಿಗೆ ಸಹಾಯವಾಗುತ್ತದೆ ಎಂದು ಹೇಳಿದರು.

ಇವತ್ತು ಸರಿಸುಮಾರು 14 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೈ ಮಗ್ಗದ ಕೆಲಸದಲ್ಲಿ ತೊಡಗಿದ್ದಾರೆ.

ಯಾರು ಮನೆಯಲ್ಲಿ ಕೈ ಮಗ್ಗದಿಂದ ಬಟ್ಟೆಗಳನ್ನು ನೈಯುತ್ತಿದ್ದಾರೆ ಅಂತವರಿಗೆ ಹೆಚ್ಚು ಸಹಕಾರ ನೀಡಿ ಅವರು ತಯಾರಿಸುವ ಬಟ್ಟೆಗಳಿಗೆ ಹೆಚ್ಚು ಬೆಲೆ ದೊರೆಯು ಹಾಗೆ ಮಾಡಿ, ಅವರನ್ನು ಜೀವನದ ಮುಖ್ಯ ವಾಹಿನಿಗೆ ಬರುವಂತೆ ಮಾಡುವಕೆಲಸಗಳನ್ನುಹೆಚ್ಚಾಗಿಹಮ್ಮಿಕೊಳ್ಳಲು ವಿನಂತಿ ಮಾಡಿಕೊಳ್ಳುತ್ತೇನೆ.

ಗುಡಿ ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಸರ್ಕಾರವು ಸಹಾಯ ಮಾಡುತ್ತಾ ಬಂದಿದೆ. ಉದಾಹರಣೆಗೆ ಹೊಲಿಗೆ ಯಂತ್ರ, ಇಸ್ತ್ರಿ ಪೆಟ್ಟಿಗೆ ಮುಂತಾದ ರೀತಿಯಲ್ಲಿ ಸರ್ಕಾರ ಅನೇಕ ಸಬ್ಸಿಡಿಗಳನ್ನು ನೀಡುತ್ತಿದೆ.

ಇದರ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಅಗಬೇಕು. ಅದೇ ರೀತಿ ಜನರು ಸಹ ಸರ್ಕಾರದ ಯೋಜನೆಗಳನ್ನು ಸರಿಯಾಗಿ ಬಳಸಿಕೊಂಡು ನಾವು ನಮ್ಮ ಸ್ವಾವಲಂಬನೆ ಬದುಕನ್ನು ಕಂಡುಕೊಳ್ಳಬೇಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕಅವರುಮಾತನಾಡಿ,ಖಾದಿಎಂಬುದು ನಮ್ಮ ದೇಶಿಯ ಉಡುಪು. 2019ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ವೋಕಲ್ ಫಾರ್ ಲೋಕಲ್ ಎಂಬ ಧ್ಯೇಯ ವಾಕ್ಯದೊಂದಿಗೆ ದೇಶೀಯ ವಸ್ತುಗಳಿಗೆ ನಾವು ಪ್ರಾತಿನ್ಯತೆ ಕೊಡಬೇಕು ಹಾಗೂ ವಿಶೇಷವಾಗಿ ಹತ್ತಿಯಿಂದ ಉತ್ಪಾದನೆ ಮಾಡುವ ಎಲ್ಲಾ ವಸ್ತುಗಳಿಗೆ ಉತ್ತೇನ ನೀಡಬೇಕೆಂದು ಕರೆ ನೀಡಿದ್ದರು. ಇದರ ಭಾಗವಾಗಿ ಆಗ ನಾವೆಲ್ಲರೂ ನಮ್ಮ ಕೊಪ್ಪಳ-ಭಾಗ್ಯನಗರದ ಸೀರೆಗಳನ್ನು ಖರೀದಿಸಿ, ಅವುಗಳನ್ನು ಉಡುಗೊರೆಯಾಗಿ ಇತರರಿಗೆ ನೀಡಿದೇವು. "ಉಷ್ಣ ಕಾಲೇ ಶೀತಂ-ಶೀತ ಕಾಲೇ ಉಷ್ಣಂ-ಅದುವೇ ಖಾದಿ ವಸ್ತ್ರಂ" ಎಂಬಂತೆ ಖಾದಿ ಬಟ್ಟೆಗಳು ಬೇಸಿಗೆ ಕಾಲದಲ್ಲಿ ನಮ್ಮ ದೇಹಕ್ಕೆ ತಂಪಾಗಿಸುವ ಮತ್ತು ಶೀತಕಾಲದಲ್ಲಿ ಬಿಸ ನೀಡುತ್ತದೆ. ನಮ್ಮ ಭಾಗದ ಜನಪ್ರಿಯ ವಸ್ತು ಕೌದಿಯ ಮಾದರಿಯ ಶಾಲುಗಳನ್ನು ಹಲವರು ಬಳಕೆ ಮಾಡುತ್ತಿದ್ದಾರೆ. ಇಂತಹ ವಸ್ತುಗಳು ಜನಪದದ ಸಂಕೇತವಾಗಿದೆ. ಈ ಮಾರಟ ಮಳಿಗೆಯಲ್ಲಿ ಕೌದಿಗೂ ಅವಕಾಶ ನೀಡಬೇಕು. ಖಾದಿ ಗ್ರಾಮೋದ್ಯೋಗವನ್ನು ಪ್ರೋತ್ಸಾಹ ಮಾಡಬೇಲಾದರೆ, ನಾವೆಲ್ಲರೂ ನಮ್ಮ ದೇಶೀಯ ವಸ್ತುಗಳನ್ನು ಖರೀದಿ ಮಾಡಿ, ಪ್ರೋತ್ಸಾಹಿಸಿದಾಗ ಮಾತ್ರ ಅದು ಬೆಳೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಕಾರ್ಯನಿರ್ವಾಹಣಾಧಿಕಾರಿ ಡಿ.ಬಿ. ನಟೇಶ್, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷರಾದ ರಾಮಣ್ಣ ನಾಯಕ, ಕೊಪ್ಪಳ ನಗರಸಭೆ ಸದಸ್ಯರಾದ ಅಕ್ಬರ್ ಪಾಶಾ ಪಲ್ಟನ್, ಮಾಜಿ ಜಿ.ಪಂ ಸದಸ್ಯರಾದ ಪ್ರಸನ್ನ ಗಡಾದ,

ಕ.ರಾ.ಖಾ&ಗ್ರಾ. ಮಂಡಳಿಯ ಕೊಪ್ಪಳ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಕೆ.ವೀರೇಶ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಕ.ರಾ.ಖಾ&ಗ್ರಾ. ಮಂಡಳಿಯ ಧಾರವಾಡ ಜಿಲ್ಲಾ ಅಭಿವೃದ್ಧಿ ಅಧಿಕಾರಿ ನಾಗನಗೌಡ ನೆಗಳೂರು ಅವರು ಕಾರ್ಯಕ್ರಮ ನಿರೂಪಿಸಿದರು.

**ಆಕರ್ಷಕ ಖಾದಿ ವಸ್ತು ಪ್ರದರ್ಶನ :**

ಖಾದಿ ಉತ್ಸವ-2025ರ ರಾಜ್ಯ ಮಟ್ಟದ ಖಾದಿ, ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ

ಖಾದಿ ವಸ್ತು ಪ್ರದರ್ಶನವು ತುಂಬಾ ಆಕರ್ಷಕವಾಗಿದ್ದು, ಸಾರ್ವಜನಿಕರ ಗಮನ ಸೆಳೆಯುವಂತಿದೆ.

# ದಾನಗಳಲ್ಲಿ ಶ್ರೇಷ್ಠವಾದ ದಾನ ಅನ್ನದಾನ

**ರಬಕವಿ-ಬನಹಟ್ಟಿ :** ಭಗವಂತ ನಮಗೆ ಕೊಟ್ಟ ಅನ್ನದಲ್ಲಿ ಸ್ವಲ್ಪ ಪ್ರಮಾಣದಲ್ಲಿಯಾದರೂ ಹಸಿದ ಹೊಟ್ಟೆಗೆ ಅನ್ನದಾನ ಮಾಡಿ, ಅದರಲ್ಲೂ ದಾನಗಳಲ್ಲಿ ಶ್ರೇಷ್ಠವಾದದ್ದು ಅನ್ನದಾನ ಎಂದು ರೇವಪ್ಪ ಗುಣಕಿ ತಿಳಿಸಿದರು. ಬನಹಟ್ಟಿಯ ಶಂಕರಲಿಂಗ ದೇವಸ್ಥಾನದಲ್ಲಿ ರವಿವಾರ ಹಮ್ಮಿಕೊಂಡ ಶ್ರಾವಣ ಮುಕ್ತಾಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿಯೂ ಇಂದಿನ ದಿನಗಳಲ್ಲಿ ಅನೇಕರಿಗೆ ಅನ್ನದ ಕೊರತೆ ಇದೆ. ಅಂಥಹ ಹಸಿದ ಹೊಟ್ಟೆಗಳಿಗೆ ಆರ್ಥಿಕವಾಗಿ ಸಬಲರಾಗಿದ್ದವರಾಗಲಿ ಅಥವಾ ದಾನಧರ್ಮ ಮಾಡಲೇ ಬೇಕೆನ್ನುವ ಬಡವನಾದರೂ ಸಹ ಒಂದಿಷ್ಟು ಅನ್ನದಾನ ಮಾಡಿ ಪುಣ್ಯ ಕಟ್ಟಿಕೊಳ್ಳಿಯೆಂದರು.

ಅದೇ ಮಾದರಿಯಲ್ಲಿ ಶಂಕರಲಿಂಗ ಟ್ರಷ್ಟನ ಅಡಿಯಲ್ಲಿ ನಗರದ ಹಿರಿಯರೆಲ್ಲರೂ ಸೇರಿ ಈ ದಾಸೋಹ ನಡೆಸುತ್ತಿರುವುದು ಸಂತಸದ ವಿಷಯ ಎಂದರು.

ಈ ಸಂದರ್ಭದಲ್ಲಿ ಶಂಕರಲಿಂಗರ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಸಮಾರಂಭದಲ್ಲಿ ಚನ್ನಪ್ಪ ಗುಣಕಿ, ಪ್ರಶಾಂತ ಕೊಳಕಿ, ಅಡಿವೆಪ್ಪ ಜುಂಜಪ್ಪನವರ, ಶಂಕರ ಕಿನ್ನಾಳ, ಚೂಡಾಮಣಿ ಲುಕ್ಕ, ಬಸು ಅಮಟಿ, ರಾಜು ಮಟ್ಟಿಕಲ್ಲಿ, ಮಹೇಂದ್ರ ಕವಿಶೆಟ್ಟಿ, ಗಂಗಪ್ಪ ಹಿಂಡಿವಳಿ, ಚಿದಾನಂದ ಹೊರಟ್ಟಿ, ರಮೇಶ ಶೇಡಬಾಳ, ಶಂಕರ ಜುಂಜಪ್ಪನವರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.


# ಅಪರಿಚಿತ ಶವ ಪತ್ತೆ

**ಬಾಗಲಕೋಟೆ :** ಮುಳವಾಡ ರೈಲು ನಿಲ್ದಾಣದಲ್ಲಿ ಅಸ್ತವ್ಯಸ್ತಗೊಂಡಿದ್ದ ಒಬ್ಬ ಅಪರಿಚಿತ ಗಂಡಸನ್ನು 108 ಅಂಬುಲೆನ್ಸ್ ಮೂಲಕ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸುವಾಗ ಮೃತಪಟ್ಟಿರುವುದಾಗಿ ವೈದ್ಯಾಧಿಕಾರಿಗಳ ಎಮ್‌ಎಲ್‌ಸಿ ವರದಿ ತಿಳಿಸಿದೆ.

ಮೃತನ ವಯಸ್ಸು ಸುಮಾರು 45-50 ವರ್ಷ. ದುಂಡು ಮುಖ, ಗೋಧಿ ಮೈಬಣ್ಣ, ದಪ್ಪ ಮೂಗು, ಗಡ್ಡ-ಮೀಸೆ ಇಟ್ಟು, ಸದೃಢ ಶರೀರ ಹೊಂದಿದ್ದಾನೆ. ತಲೆಯಲ್ಲಿ 2-3 ಇಂಚಿನ ಕಪ್ಪು ಕೂದಲು ಹಾಗೂ ಬಲ ಎದೆಯ ಮೇಲ್ಭಾಗದಲ್ಲಿ ಹಿಂದಿಯಲ್ಲಿ "ಮಾತಿಇ" ಎಂಬ ಹಚ್ಚೆ ಇದೆ. ಮೃತನು ಬೀಳಿ ಬಣ್ಣದ ಪುಲ್ ಶರ್ಟ್, ಆಕಾಶ ನೀಲಿ ಜೀನ್ಸ್ ಧರಿಸಿದ್ದು, ಬಲಗೈ ಬೆರಳಿನಲ್ಲಿ ಬೆಳ್ಳಿ ಉಂಗುರ, ಎಡಗೈ ಬೆರಳಿನಲ್ಲಿ ತಾಮ್ರದ ಉಂಗುರ ಹಾಗೂ ಕಿರು ಬೆರಳಿನಲ್ಲಿ ಉಂಗುರ ತೊಟ್ಟಿದ್ದಾನೆ.

ನೋಡಲು ಹಿಂದೂ ಮತಸ್ಥನಂತೆ ಕಾಣುತ್ತಾನೆ. ಗುರುತಿನ ಚೀಟಿ, ನಗದು ಅಥವಾ ಪ್ರಯಾಣದ ಟಿಕೆಟ್ ಸಿಕ್ಕಿಲ್ಲ.ಮೃತನ ಹೆಸರು-ವಿಳಾಸ ಪತ್ತೆ ಹಚ್ಚಿದವರು ರೈಲ್ವೆ ಪೊಲೀಸ್ ಠಾಣೆ ವಿಜಯಪುರ (ದೂರವಾಣಿ: 08352-250883, e-mail: bijapurrly@ksp.gov.in) ಅಥವಾ ರೈಲ್ವೆ ಕಂಟ್ರೋಲ್ ರೂಂ (080-22871291, dcrly@ksp.gov.in) ಸಂಪರ್ಕಿಸಲು ಕೋರಲಾಗಿದೆ.

# ಶೀತಲ್ ಆಪ್ಟೆ ನಿಧನ



**ವಿಜಯಪುರ :** ಇಲ್ಲಿಯ ಮೀನಾಕ್ಷಿ ಚೌಕ್ ನಿವಾಸಿ ಚಿತ್ಪಾವನ ಬ್ರಾಹ್ಮಣ ಸಮಾಜದ ಶ್ರೀಮತಿ ಶೀತಲ ದೀಪಕ ಆಪ್ಟೆ ತಮ್ಮ 68 ನೆಯ ವಯಸ್ಸಿನಲ್ಲಿ ಆಗಸ್ಟ್ 22 ರಂದು ಹೃದಯಾಘಾತದಿಂದ ನಿಧನರಾದರು. ಕರ್ನಾಟಕ ಕಾಯ9ನಿರತ ಪತ್ರಕರ್ತರ ಸಂಘದ ವಿಜಯಪುರ ಜಿಲ್ಲಾ ಶಾಖೆಯ ಖಜಾಂಚಿ ರಾಹುಲ ಆಪ್ಟೆ ಮೃತರ ಪುತ್ರರಲ್ಲೊಬ್ಬರು. ಮೃತರು ತಮ್ಮ ಹಿಂದೆ ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಗಲಿಕೆಗೆ ನಗರದ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ಧರ್ಮಸ್ಥಳ ಧರ್ಮೋ ರಕ್ಷತಿ ರಕ್ಷಿತಃ

ನೀವು ಧರ್ಮವನ್ನು ರಕ್ಷಿಸಿದರೆ, ಧರ್ಮ ನಿಮ್ಮನ್ನು ರಕ್ಷಿಸುತ್ತದೆ ಎನ್ನುವ ನುಡಿಯಿದೆ. ಸುಮಾರು ಎಂಟು ನೂರು ವರುಷಗಳ ಇತಿಹಾಸವನ್ನು ಹೊಂದಿರುವ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಸ್ಥಳ ನಮ್ಮ ಧರ್ಮಸ್ಥಳ. ಸತ್ಯ, ಧರ್ಮ, ನ್ಯಾಯ, ನಿಷ್ಠೆ ಮತ್ತು ಕಳಂಕರಹಿತ ಆಡಳಿತ ಸೇವೆಗೆ ಧರ್ಮಸ್ಥಳ ಹೆಸರಾಗಿದೆ. ಧರ್ಮಕ್ಕಾಗಿಯೇ ಧರ್ಮಸ್ಥಳ ಹುಟ್ಟಿಕೊಂಡದ್ದು. ಶ್ರೀ ಮಂಜುನಾಥೇಶ್ವರ ನೆಲೆಸಿರುವ ಈ ಪವಿತ್ರಕ್ಷೇತ್ರಕ್ಕೆ ಮಸಿ ಬಳಿಯಲು ಇತ್ತೀಚೆಗೆ ಒಂದು ಪುಂಡರ ಗುಂಪು ರಚನೆಯಾಯಿತು. ಇದರ ಹಿಂದೆ ಅನೇಕ ಅಗೋಚರ ವ್ಯಕ್ತಿಗಳ ಕೈವಾಡವಿರುವುದು ಸ್ಪಷ್ಟವಾಗಿದೆ. ದುರಂತಕ್ಕಿಡಾದ ಸೌಜನ್ಯಳ ಹೆಸರನ್ನು ಬಳಸಿಕೊಂಡು ಯುಟ್ಯೂಬರ್ ಸಮೀರ ಮತ್ತು ತಂಡ ದಿನಕ್ಕೊಂದು ವದಂತಿಯನ್ನು ಹಬ್ಬಿಸಲು ಪ್ರಾರಂಭಿಸಿತು. ಈ ಕೆಲಸವನ್ನು ಮಾಡಲು ಇತನಿಗೆ ವಿದೇಶದಿಂದ ಲಕ್ಷಾಂತರ ಹಣ ಬಂದಿದ್ದು ಈಗ ಜಗಜ್ಜಾಹಿರವಾಗಿದೆ. ಇತನೊಂದಿಗೆ ಸೇರಿಕೊಂಡ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ವಕೀಲ ಜಗದೀಶ್, ಮಾಸ್ಕ್‌ಮ್ಯಾನ್ ಚಿನ್ನಯ್ಯ ಮತ್ತು ಸುಜಾತ ಭಟ್ ಇವರೆಲ್ಲರೂ ಯಾವುದೋ ಒಂದು ಲಾಭಿಗಾಗಿ ನಮ್ಮ ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯಲು ಬಂದ ಕಿರಾತಕರು. ದೇಶ, ವಿದೇಶಿ ಮಾಧ್ಯಮಗಳ ಮುಂದೆ ನಿಂತು ಬೊಗಳೆ ಬಿಟ್ಟಿದ್ದೆ ಬಿಟ್ಟದ್ದು. ದಶಕಗಳ ಹಿಂದೆ ಪೌರ ಕಾರ್ಮಿಕನಾಗಿ ಧರ್ಮಸ್ಥಳದಲ್ಲಿ ಕೆಲಸ ಮಾಡಿದ್ದ ಮಾಸ್ಕ್ ಮ್ಯಾನ್ (ಚಿನ್ನಯ್ಯ) ಸುಳ್ಳು ದೂರು ನೀಡಿ ಪ್ರಕರಣವನ್ನು ತಿರುಚಿ ಮುರುಚಿ ಮಾಡಿ ಬುರುಡೆ ಕಥೆ ಕಟ್ಟಿದ್ದೇ ಕಟ್ಟಿದ್ದು. ಅವನ ಸುಳ್ಳು ಮಾಹಿತಿಯನ್ನು ಆಧರಿಸಿ, ಎಸ್.ಐ.ಟಿ. ತಂಡದವರು, ಅವನು ಹೇಳಿದ ಜಾಗಗಳಲ್ಲಿ ಗುಂಡಿಗಳನ್ನು ಅಗೆದು ಅಗೆದು, ಜನರ ತೆರಿಗೆ ಹಣದಲ್ಲಿ ಅರ್ಧ ಕೋಟಿ ರೂಪಾಯಿಗಿಂತ ಅಧಿಕ ಹಣವನ್ನು ವೆಚ್ಚ ಮಾಡಲಾಯಿತು. ಮಾಸ್ಕ್ ಮ್ಯಾನ್ ತೋರಿಸಿದ ಜಾಗದಲ್ಲಿ ಯಾವುದೇ ತಲೆಬುರುಡೆ ಅಥವಾ ಮೂಳೆಗಳುಸಿಗಲಿಲ್ಲ.ಆಗನಮ್ಮಜನರಿಗೆಗೊತ್ತಾದದ್ದು ಇವ ನಮ್ಮನ್ನೆಲ್ಲ ಮಂಗ ಮಾಡುತ್ತಿದ್ದಾನೆಂತ. ಈಗ ಎಚ್ಚೆತ್ತು ಕೊಂಡಿರುವ ಆಡಳಿತ ವರ್ಗದವರು, ಸಂಘಟನೆಯ ಮುಖಂಡರುಗಳು ಧರ್ಮಸ್ಥಳ ಚಲೋ ಯಾತ್ರೆ ಮಾಡುತ್ತಿದ್ದಾರೆ. ಯಾವಾಗ ಈ ಅನಾಮಿಕ ವ್ಯಕ್ತಿ ಇಲ್ಲ ಸಲ್ಲದ ದೂರು ನೀಡಲು ಬಂದಿದ್ದನೋ, ಆಗಲೇ ಅವನಿಗೆ ಮಂಪರು ಪರೀಕ್ಷೆ ಮಾಡಿಸಿ, ಅವನ ಚಲನವಲನ, ಹಿನ್ನೆಲೆಯನ್ನು ಮೊದಲು ಪರೀಕ್ಷಿಸಿದ್ದರೆ, ಇಷ್ಟೆಲ್ಲಾ ಅವಘಡಗಳು ಆಗುತ್ತಿರಲಿಲ್ಲವೇನೊ? ಇನ್ನು ಸಮೀರ, ಮಟ್ಟಣ್ಣ, ತಿಮರೋಡಿ, ಸುಜಾತ ಭಟ್ ಇವರ ಹಿನ್ನಲೆ ಎಲ್ಲ-ರಿಗೂ ಗೊತ್ತಿರುವಂತದ್ದೆ. ದಿನ ನಿತ್ಯ ಮಾಧ್ಯಮದಲ್ಲಿ ಕಾಣಲು ಒಂದಲ್ಲಾ ಒಂದು ಹುಚ್ಚು ವದಂತಿಯನ್ನು ಇವರು ಹಬ್ಬಿಸುತ್ತಿರುತ್ತಾರೆ. ಇವರ ಮಾತುಗಳನ್ನು ನಂಬುವ ಮುನ್ನ ಧರ್ಮಸ್ಥಳದ ಇತಿಹಾಸದ ಪುಟಗಳನ್ನು ತೆರೆದು ನೋಡುವ.

ಧರ್ಮಸ್ಥಳದ ಹಿಂದಿನ ಹೆಸರು "ಕುಡುಮ" ಎಂಬುದಾಗಿತ್ತು. ಈ ಪ್ರಾಂತ್ಯದ ನೆಲ್ಯಾಡಿ ಬೀಡು ಎಂಬ ಗೃಹದಲ್ಲಿ ಬಿರ್ಮಣ್ಣ ಪೆರ್ಗಡೆ ಮತ್ತು ಅಮ್ಮು ಬಲ್ಲಾಳ್ತಿ ಎಂಬ ಧರ್ಮಿಷ್ಠರಾದ ದಂಪತಿಗಳು ವಾಸವಾಗಿದ್ದರು. ಒಮ್ಮೆ ಇವರ ಮನೆಗೆ ನಾಲ್ಕು ಮಂದಿ ಅತಿಥಿಗಳು ಬಂದರು. ನೇಮ ನಿಷ್ಠೆಯಿಂದ ಈ ದಂಪತಿಗಳು ಅತಿಥಿ ಸತ್ಕಾರ ಮಾಡಿದರು. ಅದೇ ದಿನ ರಾತ್ರಿ ಆ ನಾಲ್ವರು ಅತಿಥಿಗಳು ಧರ್ಮದೇವತೆಗಳ ರೂಪದಲ್ಲಿ ಬಿರ್ಮಣ್ಣ ಪೆರ್ಗಡೆಯವರ ಕನಸಿನಲ್ಲಿ ಕಾಣಿಸಿಕೊಂಡು, ತಾವೆಲ್ಲರೂ ಆ ಮನೆಯಲ್ಲಿ ನೆಲೆಸಲು ಇಚ್ಛಿಸಿರುವುದಾಗಿ ಹೇಳಿದರು. ಧರ್ಮದೇವತೆಗಳ ಅಣತಿಯಂತೆ ಪೆರ್ಗಡೆಯವರು ತಮ್ಮ ಮನೆ ತೆರವು ಮಾಡಿ ದೇವರುಗಳಿಗೆ ಬಿಟ್ಟು ಕೊಟ್ಟರು.. ಕಾಳರಾಹು-ಪುರುಷ ದೈವ, ಕಳರ್ಕಾಯಿ-ಸ್ತ್ರೀ ದೈವ, ಕುಮಾರಸ್ವಾಮಿ-ಪುರುಷ ದೈವ, ಹಾಗೂ ಕನ್ಯಾಕುಮಾರಿ-ಸ್ತ್ರೀ ದೈವ ಆ ಮನೆಯಲ್ಲಿ ನೆಲೆನಿಂತರು. ಆ ದೈವಗಳ ಆಜ್ಞೆಯಂತೆ ಪೆರ್ಗಡೆಯವರು ಗುಡಿ ಕಟ್ಟಿಸಿ ಬ್ರಾಹ್ಮಣ ಅರ್ಚಕರನ್ನು ನಿತ್ಯ ಪೂಜೆಗೆ ನೇಮಿಸಿದರು. ಶಿವಯೋಗಿಗಳು ಇಲ್ಲಿ ಈಶ್ವರಲಿಂಗವನ್ನು ಸ್ಥಾಪಿಸುವಂತೆ ಸಲಹೆ ನೀಡಿದರು. ಧರ್ಮದೇವತೆಗಳು ಕೂಡ ಇದನ್ನೇ ಹೇಳಿ ಕದ್ರಿಯಲ್ಲಿರುವ ಮಂಜುನಾಥನ ಲಿಂಗ ತರಲು ತಮ್ಮ ಪ್ರತಿನಿಧಿಯಾಗಿ ಅಣ್ಣಪ್ಪಸ್ವಾಮಿಯನ್ನು ಕಳುಹಿಸಿದರು. ಕುಡುಮಕ್ಕೆ (ಧರ್ಮಸ್ಥಳ) ಮಂಜುನಾಥನ ಲಿಂಗ ಬರುವುದರೊಳಗೆ ಅಲ್ಲಿ ಧರ್ಮದೇವತೆಗಳು ದೇವಾಲಯ ನಿರ್ಮಿಸಿದ್ದರು ಎಂಬ ಕಥೆ ಇಲ್ಲಿ ಜನಜನಿತವಾಗಿದೆ.

ಸುಮಾರು ಇಪ್ಪತ್ತು ತಲೆಮಾರುಗಳಿಂದ ಆಡಳಿತ ನಡೆಸುತ್ತಿರುವ ಪೆರ್ಗಡೆ ಕುಟುಂಬದ ವೀರೇಂದ್ರ ಹೆಗ್ಗಡೆಯವರು ಈಗ ಇಲ್ಲಿನ ಕಾವಂದರು. ರಾಜ್ಯಸಭೆಯ ಸದಸ್ಯರಾಗಿರುವ ಇವರನ್ನು ಸ್ಥಳೀಯರು ನಡೆದಾಡುವ ದೇವರೆಂದು ಕರೆಯುತ್ತಾರೆ. ಇವರ ಸರಳತೆ, ಸಜ್ಜನತೆ, ನಿಷ್ಕಳಂಕ ವ್ಯಕ್ತಿತ್ವ ಮತ್ತು ಮಾಡುತ್ತಿರುವ ಸಮಾಜ ಸೇವಾ ಕಾರ್ಯಗಳು ಕಾರಣವಾಗಿವೆ. ಯಾವ ಸರ್ಕಾರಗಳು ನಿರಂತರವಾಗಿ ಮಾಡದಿರುವ ಕಾರ್ಯವನ್ನು ಇಲ್ಲಿನ ಆಡಳಿತ ಮಂಡಳಿ ಮಾಡುತ್ತಿದೆ. ಅದರಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆ ಪ್ರಮುಖವಾಗಿದೆ. ಇದು ಗ್ರಾಮೀಣಾಭಿವೃದ್ಧಿಗಾಗಿ ಚಟುವಟಿಕೆಗಳನ್ನು ಆಯೋಜಿಸುತ್ತದೆ. ಇದರ ಉದ್ಯೋಗಿಗಳು ಹಳ್ಳಿಗಳಿಗೆ ಹೋಗಿ ಸ್ತ್ರೀ ಶಕ್ತಿ ಸಂಘ ಎಂಬ ಸಣ್ಣ ಗುಂಪುಗಳನ್ನು ರಚಿಸುತ್ತಾರೆ. ಗುಂಪಿನ ಸದಸ್ಯರಿಗೆ ವ್ಯವಹಾರಕ್ಕಾಗಿ ಬ್ಯಾಂಕ್ ಸಾಲಗಳನ್ನು ಒದಗಿಸುತ್ತಾರೆ. ಅವರು ಬೇಸಿಗೆಯಲ್ಲಿ ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಸಹ ಮಾಡುತ್ತಾರೆ. ಸಮಾಜದಲ್ಲಿ ವರದಕ್ಷಿಣೆ ಪಿಡುಗು ಮತ್ತು ಆಡಂಬರದ ಮದುವೆಯ ಸುಧಾರಣೆಗೋಸ್ಕರ ಸಾಮೂಹಿಕ ವಿವಾಹಗಳನ್ನು ದೇಗುಲದ ವತಿಯಿಂದ 1972 ರಿಂದ ಇಂದಿನವರೆಗೆ ಸತತವಾಗಿ ನಡೆಸಿಕೊಂಡು ಬಂದಿದ್ದಾರೆ. ಧರ್ಮಸ್ಥಳಕ್ಕೆ ಆಗಮಿಸುವ ಎಲ್ಲಾ ಭಕ್ತಾದಿಗಳಿಗೆ ಉಚಿತ ಭೋಜನದ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ ಸುಸಜ್ಜಿತ ವ್ಯವಸ್ಥೆಗಳನ್ನು ಒಳಗೊಂಡ ಅನ್ನಪೂರ್ಣ ಎಂಬ ಹೆಸರಿನ ಅನ್ನದಾನ ಛತ್ರವಿದೆ. ಧರ್ಮಸ್ಥಳ ದೇವಾಲಯದ ವತಿಯಿಂದ ಶ್ರೀ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ಉನ್ನತ ಶಿಕ್ಷಣವನ್ನು ನೀಡುವ ಸುಮಾರು ಐವತ್ತಕ್ಕಿಂತಲೂ ಹೆಚ್ಚು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ಉಜಿರೆ, ಧಾರವಾಡ, ಮೈಸೂರು, ಮಂಗಳೂರು, ಹಾಸನ, ಉಡುಪಿ ಮುಂತಾದ ಕಡೆ ವ್ಯಾಪಿಸಿಕೊಂಡಿವೆ. ಹಳ್ಳಿಯ ಬಡ ಜನರ ಅನುಕೂಲಕ್ಕೆ ಸಂಚಾರಿ ಆಸ್ಪತ್ರೆ, ಪ್ರಕೃತಿ ಚಿಕಿತ್ಸೆಯನ್ನು ನೀಡುವ ಶಾಂತಿವನ ನ್ಯಾಚುರೋಪತಿ ಆಸ್ಪತ್ರೆ, ಆಯುರ್ವೇದ ಚಿಕಿತ್ಸೆಗಾಗಿ ಉಡುಪಿ ಮತ್ತು ಹಾಸನದಲ್ಲಿ ಸುಸಜ್ಜಿತ ಆಸ್ಪತ್ರೆಗಳು ಮತ್ತು ಅಲೋಪತಿ ಔಷಧ ಚಿಕಿತ್ಸೆಗಾಗಿ ಧಾರವಾಡ ಮತ್ತು ಉಜಿರೆಗಳಲ್ಲಿ ಆಸ್ಪತ್ರೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇದಷ್ಟೇ ಅಲ್ಲದೇ

ಧರ್ಮಸ್ಥಳದ ದೇವಸ್ಥಾನ ವತಿಯಿಂದ ಹಳೆ ಕಾರುಗಳ ಸಂಗ್ರಹಾಲಯ ಮತ್ತು ಮಂಜೂಷಾ ವಸ್ತು ಸಂಗ್ರಹಾಲಯವಿದೆ. ಹಳೆಯ ಹಸ್ತ ಪ್ರತಿಗಳು, ಗ್ರಂಥಗಳ ರಕ್ಷಣೆಯನ್ನು ಮಾಡುವ ಗ್ರಂಥಾಲಯವೂ ಇಲ್ಲಿದೆ.

ಇಂತಹ ಧರ್ಮಸ್ಥಳದ ಬಗ್ಗೆ ಪ್ರತಿನಿತ್ಯ ಒಂದಲ್ಲ ಒಂದು ವದಂತಿಗಳು ಬರುತ್ತಲಿವೆ. ಕಾಣದ ಕೈಗಳು ಇದರ ಹಿಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹಿಂದೂಗಳ ನಂಬಿಕೆಗೆ ಧಕ್ಕೆತಂದರೆ, ಸನಾತನ ಬೇರುಗಳನ್ನು ಬಹಳ ಸುಲಭವಾಗಿ ಕಿತ್ತೆಸೆಯುವ ಹುನ್ನಾರ. ಧರ್ಮಸ್ಥಳದಲ್ಲಿ ಆರಾಧಿಸುವ ದೇವರು ಶಿವನ ಸ್ವರೂಪನಾದ ಶ್ರೀ ಮಂಜುನಾಥ-'ೇಶ್ವರ ಸ್ವಾಮಿ, ಪೂಜೆ ಮಾಡುವವರು ವೈಷ್ಣವರು, ಆಡಳಿತ ನಡೆಸುವವರು ಜೈನರು ಮತ್ತು ಬಂಟ-ರು. ಇವರೆಲ್ಲರನ್ನು ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಗಟ್ಟಿ, ಸಾಮರಸ್ಯವನ್ನು ಹಾಳು ಮಾಡುವುದು ಇವರೆಲ್ಲರ ಉದ್ದೇಶವಾಗಿರಬಹುದಲ್ಲವೇ?

ಗಮನಿಸಬೇಕಾದ ಮತ್ತೊಂದು ವಿಷಯವೆಂದರೆ ಧರ್ಮಸ್ಥಳ ಮುಜರಾಯಿ ಇಲಾಖೆಗೆ ಸೇರಿಲ್ಲ. ಅಣ್ಣಪ್ಪ ದೇವರಿಗೆ ಹರಕೆ ಹೇಳಿಕೊಳ್ಳುವವರು, ತಪ್ಪು ಕಾಣಿಕೆ ಸಲ್ಲಿಸುವ ಲಕ್ಷಾಂತರ ಭಕ್ತರಿದ್ದಾರೆ. ದೇವಸ್ಥಾನಕ್ಕೆ ಬರುವ ಆದಾಯದ ಮೇಲೆ ಕೆಲವರ ವಕ್ರ ದೃಷ್ಟಿ ಇರಬಹುದೇ? ಎಂಬ ಗುಮಾನಿ.

ಧರ್ಮಸ್ಥಳ ಸಂಸ್ಥಾನದ ಸಹಕಾರ ಮತ್ತು ಸವಲತ್ತುಗಳಿಂದ ಅಲ್ಲಿನ ಜನರು ಸ್ವಾವಲಂಬಿಗಳಾಗಿದ್ದಾರೆ. ಅಲ್ಲಿ ನೆಲೆಸಿರುವ ಒಂದೇ ಒಂದು ಕುಟುಂಬವನ್ನು ಮತಾಂತರ ಮಾಡಲು ಸಾಧ್ಯವಾಗಿಲ್ಲ. ಖಾಸಗಿ ಮಿಷನರಿ ಶಾಲೆಗಳು, ಮದ್ಯದಂಗಡಿಗಳು, ಜೂಜಾಟ ಕೇಂದ್ರಗಳು, ಲೇವಾದೇವಿ ಸಂಸ್ಥೆಗಳು, ಡ್ರಗ್ಸ್ ದಂಧೆಗಳನ್ನು ಮಾಡಲಾಗುತ್ತಿಲ್ಲ. ಇಲ್ಲಿ ಕುಡುಕರಿಗೆ ಪಬ್ ಬಾರುಗಳು ಇಲ್ಲ.

ಮಾಂಸಹಾರ ಬಡಿಸುವ ಬಿರಿಯಾನಿ ಅಂಗಡಿಗಳಿಲ್ಲ. ಪಿಜ್ಜಾ ಬರ್ಗರ್ ತಿನಿಸುವ ವಿದೇಶಿ ವಾಣಿಜ್ಯ ಮಳಿಗೆಗಳಿಗೆ ಅವಕಾಶವಿಲ್ಲ. ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ಮತ್ತು ವ್ಯಾಪಾರದ ಅವಕಾಶವಿರುವುದು, ಉಳಿದವರಿಗೆ ನುಂಗಲಾರದ ತುತ್ತಾಗಿದೆ ಎನಿಸುವುದಲ್ಲವೇ?

ಪ್ರತಿದಿನ ಲಕ್ಷಾಂತರ ಜನರು ಇಲ್ಲಿಗೆ ಬಂದು ದೇವರ ದರ್ಶನ ಪಡೆದು ಸಂತೃಪ್ತ ಭಾವನೆಯಿಂದ ತೆರಳುವುದನ್ನು ನೋಡಲಾಗದ ಷಡ್ಯಂತ್ರಕಾರರು ಧರ್ಮಸ್ಥಳದ ಸಾಮರಸ್ಯದ ಮೇಲೆ ಕಣ್ಣಿಟ್ಟಿದ್ದಾರೆ ಎನಿಸುವುದಲ್ಲವೆ?

ರಾಜ್ಯದ ಗಮನ ಸೆಳೆದಿದ್ದ ಕೋಟ್ಯಂತರ ಹಿಂದೂಗಳ ಭಾವನೆಗಳ ಜೊತೆಗೆ ಚೆಲ್ಲಾಟವಾಡಿದ್ದ ಹೇಡಿ ಮುಸುಕುದಾರಿ ಅನಾಮಿಕ ಚಿನ್ನಯ್ಯ, ಮಹೇಶ್ ಶೆಟ್ಟಿ ತಿಮರೋಡಿ, ಯುಟ್ಯೂಬರ್ ಸಮೀರ್, ವಕೀಲ ಜಗದೀಶ್, ಗಿರೀಶ್ ಮಟ್ಟಣ್ಣ ಮತ್ತು ಸುಜಾತ ಭಟ್ ಮತ್ತು ತಂಡದವರಿಗೆಲ್ಲ ಕಠಿಣ ಶಿಕ್ಷೆಯಾದರೆ, ಮತ್ತೊಮ್ಮೆ ಹಿಂದೂಗಳ ನಂಬಿಕೆಗೆ ಚ್ಯುತಿ ತರಲು ಇಂತಹ ಡೊಂಗಿಗಳು ಭಯಪಡುತ್ತಾರೆ. ದುರದೃಷ್ಟವೆಂದರೆ ಇವರನ್ನು ಬಂಧಿಸಿದ ಕೆಲವೇ ಗಂಟೆಗಳಲ್ಲಿ ಬೇಲ್ ಮೂಲಕ ಇವರು ಹೊರಬರುತ್ತಾರೆ. ಮತ್ತೆ ಹೊಸ ಹೊಸ ನಾಟಕಗಳನ್ನು ಶುರು ಮಾಡುತ್ತಾರೆ. ಇದೇ ಇಲ್ಲಿನ ದುರಂತ ಅಲ್ಲವೆ?

ಭಗವದ್ಗೀತೆಯ ನಾಲ್ಕನೇ ಅಧ್ಯಾಯದ ಏಳು ಮತ್ತು ಎಂಟನೇ ಶ್ಲೋಕದಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿರುವ

**"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥**

ಯಾವಾಗ ಧರ್ಮದ ಅವನತಿಯಾಗುತ್ತದೆಯೋ, ಯಾವಾಗ ಸದಾಚಾರವು ಕಡಿಮೆಯಾಗಿ, ಅಧರ್ಮವು ಉನ್ನತ ಸ್ಥಾನಕ್ಕೇರುತ್ತದೆಯೋ ಮತ್ತು ದುಷ್ಟತನವು ಹೆಚ್ಚುತ್ತದೆಯೋ.

ಆಗ ನಾನು ಭೂಮಿಗೆ ಅವತರಿಸುತ್ತೇನೆ.

ಒಳ್ಳೆಯವರನ್ನು ರಕ್ಷಿಸಲು ಮತ್ತು ದುಷ್ಟರನ್ನು ವಿನಾಶ ಮಾಡಲು, ಧರ್ಮವನ್ನು ದೃಢವಾಗಿ ಸ್ಥಾಪಿಸಲು.

ಪ್ರತಿಯೊಂದು ಯುಗದಲ್ಲೂ ನಾನು ಅವತರಿಸುತ್ತೇನೆ ಎಂದು ಹೇಳಿರುವುದನ್ನು ಸ್ಮರಿಸೋಣ.

ಅಣ್ಣಪ್ಪ ಕಣ್ಣುಬಿಟ್ಟಿದ್ದಾನೆ.ಶಿವರೌದ್ರತಾಂಡವವಾಡುತ್ತಾನೆ ಎಂಬುದು ನಮಗೆಲ್ಲ ಗೊತ್ತು. ಈ ನಾಸ್ತಿಕವಾದಿಗಳಿಗೆ, ಜೀಹಾದಿಗಳಿಗೆ ಮತ್ತು ಪೊಳ್ಳು ಹೋರಾಟಗಾರರಿಗೆ ಸರಿಯಾದ ಸಮಯಕ್ಕೆ ಶಿಕ್ಷಿಸದಿದ್ದರೆ, ಮತ್ತೆ ಇಂತಹ ನೂರಾರು ಕೊಳಕುಮಂಡಲ ಜೀವಿಗಳು ಹುಟ್ಟುತ್ತವೆ. ಇವು ಸಾಮರಸ್ಯದ ಸಮಾಜದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡುತ್ತವೆ. ಈಗ ಧರ್ಮಸ್ಥಳ, ಮುಂದೆ ಮತ್ತೊಂದು ಪವಿತ್ರ ಕ್ಷೇತ್ರದ ಮೇಲೆ ಇವರ ವಕ್ರದೃಷ್ಟಿ ಹರಿಯಬಹುದು. ಹಾಗಾಗಿ ಧರ್ಮಸ್ಥಳದ ಭಕ್ತರು ಮಾತ್ರವಲ್ಲದೇ ಎಲ್ಲಾ ಭಾರತೀಯರು ಎಚ್ಚೆತ್ತುಕೊಳ್ಳಿ.. ಇಂತಹ ಒಳಸಂಚುಕೋರರನ್ನು ಬಗ್ಗು ಬಡೆಯಲು ಸನ್ನದ್ಧರಾಗಿ. ನಮ್ಮ ಧರ್ಮ ಮತ್ತು ಧರ್ಮಸ್ಥಳದ ಪಾವಿತ್ರತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಏಳಿ ಎದ್ದೇಳಿ ನಮ್ಮತನವನ್ನು, ನಮ್ಮ ದೇವಾಲಯಗಳನ್ನು ರಕ್ಷಿಸಿಕೊಳ್ಳುವ ಗುರುತರ ಹೊಣೆ ನಮ್ಮ ಮೇಲಿದೆ. ಓಂ ಶ್ರೀ ಮಂಜುನಾಥ-'ೇಶ್ವರಾಯ ನಮಃ

***

। ಲತಾ ಕೆ.ಎಸ್. ಹೆಗಡೆ
ಬೆಂಗಳೂರು



## ಗೌರಿ ಗಣೇಶ, ಈದ್ ಮಿಲಾದ್ ಹಬ್ಬ: ಪೊಲೀಸ್ ಪಥ ಸಂಚಲನ



**ದೇವರಹಿಪ್ಪರಗಿ :** ಮುಂಬರುವ ಗೌರಿ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಹಬ್ಬಗಳನ್ನು ಶಾಂತಿ ಸೌಹಾರ್ದತೆಯಿಂದ ಆಚರಿಸುವ ನಿಟ್ಟಿನಲ್ಲಿ ಹಾಗೂ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ವಿಜಯಪುರ ಜಿಲ್ಲಾ ಗ್ರಾಮೀಣ ಪೋಲಿಸ್ ಠಾಣೆಯ ಡಿವೈಎಸ್ಪಿ ಪಿ.ಎಸ್.ಸುಲ್ಪಿ ಹೇಳಿದರು.

ಪಟ್ಟಣದಲ್ಲಿ ರವಿವಾರದಂದು ಹಬ್ಬಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಪಥ ಸಂಚಲನ ನೇತೃತ್ವ ವಹಿಸಿ ಮಾತನಾಡಿದ ಅವರು, ಗೌರಿ ಗಣೇಶ ಉತ್ಸವ ಹಾಗೂ ಈದ್ ಮಿಲಾದ್ ಹಬ್ಬಗಳಲ್ಲಿ ಯಾವುದೇ ರೀತಿಯ ಅನಾಹುತಗಳು ಆಗದಂತೆ ಶಾಂತಿಯುತವಾಗಿ ಆಚರಿಸಬೇಕು. ಸಾರ್ವಜನಿಕರ ಸುರಕ್ಷತೆಗೆ ಪೊಲೀಸ್ ಇಲಾಖೆ ಇದೆ ಎಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪಥಸಂಚಲನ ನಡೆಸಲಾಯಿತು ಎಂದರು.

ನಂತರ ಪಟ್ಟಣದ ಪೊಲೀಸ್ ಠಾಣೆಯಿಂದ ಬಸ್ ನಿಲ್ದಾಣದ ಎದುರುಗಡೆ, ಮೇನ್ ಬಜಾರ್ ರಸ್ತೆ, ಕರಿದೇವರ ದೇವಸ್ಥಾನ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಸೇರಿದಂತೆ ಪ್ರಮುಖ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಪಥಸಂಚಲನ ನಡೆದಿದ್ದು, ಜನರಲ್ಲಿ ಸುರಕ್ಷತೆ, ವಿಶ್ವಾಸ ಮೂಡಿಸುವ ಉದ್ದೇಶದ ಜೊತೆಗೆ ಶಾಂತಿಯ ಸಂದೇಶ ಸಾರಿದರು. ಗ್ರಾಮೀಣ ಪೋಲಿಸ್ ಠಾಣೆಯ ಸಿಪಿಐ ರಮೇಶ ಅವಜಿ, ಸ್ಥಳೀಯ ಪೊಲೀಸ್ ಠಾಣೆಯ ಪಿಎಸ್ಐ ಸಚಿನ್ ಆಲಮೇಲಕರ್, ತಿಕೋಟಾ ಪಿಎಸ್ಐ ದೇವರಾಜ ಉಳ್ಳಾಗಡ್ಡಿ, ಮನಗೂಳಿ ಪಿಎಸ್ಐ ಶ್ರೀಕಾಂತ ಕಾಂಬಳೆ, ಬಬಲೇಶ್ವರ ಪಿಎಸ್ಐ ಬಸವರಾಜ ಮೇಳಪ್ಪನವರ ಸೇರಿದಂತೆ ವಿವಿಧ ಪೋಲಿಸ್ ಠಾಣೆಯ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಯಥಾಸ್ಥಿತಿ ಕಾಯ್ದುಕೊಂಡ ಕೃಷ್ಣೆ: ನಿಟ್ಟುಸಿರು ಬಿಟ್ಟ ಜನತೆ






**ತೇರದಾಳ :** ಬಾಗಲಕೋಟೆ ಜಿಲ್ಲೆಯ ಜೀವನಾಡಿ ಕೃಷ್ಣಾ ನದಿಗೆ ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಹರಿದು ಬರುವ ನೀರಿನ ಪ್ರಮಾಣ ಭಾನುವಾರ ಕಡಿಮೆಗೊಂಡಿದ್ದು, ಜಿಲ್ಲೆ ಪ್ರವೇಶ ಮಾಡುವ ತಮದಡ್ಡಿ ಹಾಗೂ ಹಳಿಂಗಳಿ ಗ್ರಾಮದ ಕೃಷ್ಣಾ ನದಿಯಲ್ಲಿ ನೀರಿನ ಇಳಿಕೆಯ ಪ್ರಮಾಣದಲ್ಲಿ ಅಷ್ಟೊಂದು ಬದಲಾವಣೆ ಕಂಡು ಬಂದಿಲ್ಲ. ಶನಿವಾರ ಇದ್ದ 2.65 ಲಕ್ಷ ಕ್ಯೂಸೆಕ್ ಒಳ ಹರಿವು ಭಾನುವಾರ 2.45 ಕ್ಯೂಸೆಕ್ ದಷ್ಟು ಆಗಿದೆ. ಇದರಿಂದ ಇಪ್ಪತ್ತು ಸಾವಿರ ಕ್ಯೂಸೆಕ್ ನಷ್ಟು ಹರಿದು ಬರುವ ನೀರಿನ ಪ್ರಮಾಣ ಕಡಿಮೆಗೊಂಡಿದೆ.

**ಅಧಿಕಾರಿಗಳ ಬೀಡು:** ತಮದಡ್ಡಿ ಹಾಗೂ ಹಳಿಂಗಳಿ ಗ್ರಾಮಗಳಲ್ಲಿ ನೋಡಲ್ ಅಧಿಕಾರಿ, ಗ್ರಾಮ ಆಡಳಿತಾಧಿಕಾರಿ, ಪಿಡಿಓ, ಆಶಾ ಕಾರ್ಯಕರ್ತೆಯರು ಬೀಡು ಬಿಟ್ಟಿದ್ದು, ಪರಿಸ್ಥಿತಿ ಕುರಿತು ಅವಲೋಕನ ನಡೆಸುತ್ತ ಮೇಲಾಧಿಕಾರಿಗಳ ಜತೆಗೆ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ.

ನೆರೆ ಹಾವಳಿಯಿಂದ ಬಾಧಿತಗೊಂಡಿರುವ ಕುಟುಂಬಗಳಿಗೆ ನೆರವು ಒದಗಿಸುವುದರಲ್ಲಿ ತೊಡಗಿದ್ದಾರೆ.

ಜಾನುವಾರಗಳಿಗೆ ಮಾತ್ರ ಭಾನುವಾರ ಮದ್ಯಾಹ್ನದವರೆಗೂ ಮೇವು ವಿತರಣೆ ಆಗಿರಲಿಲ್ಲ. ಇದರಿಂದ ಸಂತ್ರಸ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

**ಕಾಳಜಿ ಕೇಂದ್ರದಲ್ಲಿ ಊಟ:**
ತಮದಡ್ಡಿ ಗ್ರಾಮದ ಚನಾಳ ವಸತಿ ಸೇ–ರಿದಂತೆ ನದಿ ತೀರದ ಕುಟುಂಬಗಳ ಮನೆಗಳ ಸುತ್ತ ನೀರು ಆವರಿಸಿದ್ದರಿಂದ ಅಲ್ಲಿನ ಕುಟುಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದ್ದು, ಗ್ರಾಮದ ಸರಕಾರಿ ಶಾಲೆಯಲ್ಲಿ ಪ್ರಾರಂಭಿಸಿರುವ ಕಾಳಜಿ ಕೇಂದ್ರದಲ್ಲಿ ಶನಿವಾರ ರಾತ್ರಿ ಅನ್ನ ಸಾಂಬಾರ, ಭಾನುವಾರ ಬೆಳಿಗ್ಗೆ ಉಪಹಾರಕ್ಕೆ ಅವಲಕ್ಕಿ ಹಾಗೂ ಮದ್ಯಾಹ್ನ ಚಪಾತಿ ಪಲ್ಲೆ, ಅನ್ನ ಸಾಂಬರ ವ್ಯವಸ್ಥೆ ಮಾಡಲಾಗಿದೆ ಎಂದು ನೋಡಲ್ ಅಧಿಕಾರಿ ಎಫ್.ಬಿ.ಗಿಡ್ಡಿ ಮಾಹಿತಿ ನೀಡಿದ್ದಾರೆ. ತಮದಡ್ಡಿ ಹಾಗೂ ಹಳಿಂಗಳಿ ಗ್ರಾಮಕ್ಕೆ ನುಗ್ಗಿರುವ ನೀರು ಮದ್ಯಾಹ್ನದ ವೇಳೆಗೆ ಆರು ಇಂಚಿನಷ್ಟು ನೀರು ಇಳಿಕೆ ಕಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಸಹಕಾರ ಕ್ಷೇತ್ರ ಬೆಳೆದರೆ ದೇಶದ ಅಭಿವೃದ್ಧಿ ಖಚಿತ



**ರಬಕವಿ–ಬನಹಟ್ಟಿ :** ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಗ್ರಾಹಕರ, ಶೇರುದಾರರ ಮತ್ತು ನಿರ್ದೇಶಕರ ಪರಸ್ಪರ ಸಹಕಾರ ಮುಖ್ಯ. ಸಹಕಾರ ಕ್ಷೇತ್ರ ಬೆಳೆದರೆ ದೇಶದ ಅಭಿವೃದ್ಧಿ ಖಚಿತವೆಂದು ಬನಹಟ್ಟಿ ಗೌರಿಶಂಕರ ಸೊಸೈಟಿಯ ಅಧ್ಯಕ್ಷ ಶಂಕರ ಟಿರಕಿ ತಿಳಿಸಿದರು.

ಬನಹಟ್ಟಿಯ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನೇಕಾರಿಕೆ ಜನಾಂಗ ಹೊಂದಿರುವ ರಬಕವಿ–ಬನಹಟ್ಟಿಯಲ್ಲಿ ನೇಕಾರರ ಅಭ್ಯುದಯಕ್ಕೆ ಶ್ರಮಿಸುವುದು ಅವಶ್ಯವಾಗಿದೆಯೆಂದರು.

ಅಲ್ಲದೆ ಪ್ರಸಕ್ತ ವರ್ಷ 44.32 ಲಕ್ಷ ರೂ. ಗಳಷ್ಟು ಲಾಭ ಗಳಿಸಿರುವದು ವಿಶೇಷವಾಗಿದೆ ಎಂದರು.

ರವಿ ಶಿರಹಟ್ಟಿ ಮಾತನಾಡಿ, ಆರ್ಥಿಕ ಬೆಳವಣಿಗೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿಗಿಂತಲೂ ಸಹಕಾರ ಸಂಘಗಳ ಕೊಡುಗೆ ಅಪಾರವೆಂದರು. ಸರ್ಕಾರದ ಆಶಯಕ್ಕೆ ತಕ್ಕಂತೆ ಸಹಕಾರಿ ಸಂಘಗಳು ಕೃಷಿಕರ, ನೇಕಾರರ ಅಭ್ಯುದಯಕ್ಕೆ ಕೊಡುಗೆ ನೀಡಿವೆ ಎಂದರು.

ಮಹಾನಿಂಗಪ್ಪ ಹಾಸಿಲಕರ, ಸುನೀಲ ಶಿರಹಟ್ಟಿ, ಭಗವಾನದಾಸ ಲಡ್ಡಾ, ಮನೋಹರ ಪೋರೆ, ಸೋಮಶೇಖರ ಗುಣಕಿ, ಬಾಳಪ್ಪ ಕದಮ, ಶಾಂತಿನಾಥ ಕಾಸಾರ, ಬಸವಂತ ಟಿರಕಿ, ಶಾಂತಾ ಶಿರಹಟ್ಟಿ, ಮಾಧುರಿ ಪೋರೆ, ಕಾಡಪ್ಪ ಮಂಟೂರ, ರಾಮಣ್ಣ ಪಾತ್ರೋಟ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸಹಕಾರ ಸಂಘದ ಯಶಸ್ವಿಗೆ ಪ್ರಾಮಾಣಿಕತೆ ಅವಶ್ಯ



**ರಬಕವಿ :** ರಾಜ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ, ಸಮಾಜ ಸೇವಾಭಾವದಿಂದ ಹೆಮ್ಮರವಾಗಿ ಬೆಳೆದಿದೆ. ಸಂಘಗಳು ಯಶಸ್ವಿಯಾಗಲು ಆಡಳಿತ ಮಂಡಳಿಯ ಪ್ರಾಮಾಣಿಕತೆ, ಸಿಬ್ಬಂದಿಯ ಸಹಕಾರ ಮನೋಭಾವನೆ ಮುಖ್ಯವೆಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಅವರು ಭಾನುವಾರ ಇಲ್ಲಿನ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಧನಲಕ್ಷ್ಮಿ ಪತ್ತಿನ ಸಹಕಾರಿ ಸಂಘದ ರಜತ ಮಹೋತ್ಸವ ಮತ್ತು ನೂತನ ಕಟ್ಟಡದ ಉದ್ಘಾಟನೆ ಮತ್ತು ಧನಶ್ರೀ ಸ್ಮರಣ ಸಂಚಿಕೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಸರ್ಕಾರ ರೈತರ ಸಾಲದಂತೆ ನೇಕಾರರ ಸಾಲವನ್ನು ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಸಹಕಾರ ಸಂಘಗಳು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಲಿ. ಸಾಲಗಾರರು ಬದ್ಧತೆ ಮೆರೆದು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದಲ್ಲಿ ಠೇವುದಾರರ, ಶೇರುದಾರರ ಹಿತ ಕಾಯ್ದಂತೆಯಾಗುತ್ತದೆ. ಸಂಘವು ಹೊಸ ಶಾಖೆಗಳನ್ನಾರಂಭಿಸಿ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿ, ಹೆಮ್ಮರವಾಗಿ ಬೆಳೆಯಲೆಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಕ್ಷೇತ್ರದ ನೇಕಾರ ಸಮುದಾಯದ ಸಮಸ್ಯೆಗಳನ್ನು ಜವಳಿ ಸಚಿವರೊಡನೆ ಚರ್ಚಿಸಿದ್ದು, ರಿಯಾಯತಿ ಬಡ್ಡಿ ದರದಲ್ಲಿ ನೇಕಾರರ ಸಾಲದ ರಸೀದಿ ಹಾಜರುಪಡಿಸುವ ನಿಯಮ ಕೈಬಿಡಬೇಕೆಂದು ಆಗ್ರಹಿಸಿದ್ದಾಗಿ ಶಾಸಕ ಸಿದ್ದು ಸವದಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀ ಮಾತನಾಡಿ, ಸಂಘದ ಅಭಿವೃದ್ಧಿಯ ಸಂದರ್ಭದಲ್ಲಿ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ. ಗ್ರಾಹಕರ ಹಿತವನ್ನು ರಕ್ಷಣೆ ಮಾಡುವುದರ ಜೊತೆಗೆ ಅವರ ವಿಶ್ವಾಸಕ್ಕೂ ಪಾತ್ರರಾಗಬೇಕು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಚಿದಾನಂದ ಗಾಳಿ ಮಾತನಾಡಿ, ಸಂಘವು ತನ್ನ ಷೇರುದಾರರಿಗೆ ಎರಡು ದಶಕಗಳಿಂದ ಶೇಕಡಾ ಇಪ್ಪತ್ತರಷ್ಟು ಲಾಭಾಂಶವನ್ನು ನೀಡುತ್ತಿದೆ ಎಂದರು. ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಪ್ರಕಾಶ ತಪಶೆಟ್ಟಿ ಮಾತನಾಡಿದರು.

ರಬಕವಿಯ ಗುರುಸಿದ್ಧೇಶ್ವರ ಸ್ವಾಮೀಜಿ ಮತ್ತು ಸಂಖದ ಮಹೇಶ ದೇವರು ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಕವಿತಾ ಕೊಣ್ಣೂರ, ಬ್ಯಾಂಕ್ ಉಪಾಧ್ಯಕ್ಷ ವಿಜಯಕುಮಾರ ಕರಡಿಗುದ್ದಿ,

ಡಾ. ಸಂಗಪ್ಪ ಸಾಬೋಜಿ, ಬಸವರಾಜ ಯೆಂಡಿಗೇರಿ, ಬಸವರಾಜ ಮಟ್ಟಿಕಲ್ಲಿ, ರಾಜಶೇಖರ ಕುರ್ಲಿ, ರಾಜಶೇಖರ ಭಿಲವಡಿ, ಶೋಭಾ ಭಿಲವಡಿ, ಸುಜಾತಾ ಗೊಳಸಂಗಿ, ಮಹಾನಂದಾ ಧಡ್ಡ, ಭೀಮಪ್ಪ ಭಜಂತ್ರಿ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಈರಣ್ಣ ಗುಣಕಿ, ಸುನೀಲ ಪತ್ತಾರ, ಎಸ್. ಆರ್. ರಾಮನಗೌಡ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಹಾಗೂ ಧರೆಪ್ಪ ಉಳ್ಳಾಗಡ್ಡಿ,

ರಾಮಣ್ಣ ಹುಲಕುಂದ, ಬಸವರಾಜ ತೆಗ್ಗಿ, ಸಂಗಪ್ಪ ಕುಂದಗೋಳ, ಶಿವಾನಂದ ದಾಶ್ಯಾಳ, ಕಸಾಪ ತಾಲೂಕು ಅಧ್ಯಕ್ಷ ಮ. ಕೃ. ಮೇಗಾಡಿ ಭಾಗವಹಿಸಿದ್ದರು.

# ಸಮಾಜ ಸೇವೆಯಲ್ಲಿ ಬೆಂಬಲಿಗರನ್ನು ಮರೆಯಬಾರದು: ಬಸವರಾಜ ಕುಂಬಳಾವತಿ



**ಬಾಗಲಕೋಟೆ :** ಸಮಾಜ ಸೇವೆಯಲ್ಲಿ ಸದಾ ಬೆಂಬಲಿಗರನ್ನು ಯಾವತ್ತೂ ಮರೆಯಬಾರದು ಎಂದು ಕಮತಗಿ ಪಟ್ಟಣ ಪಂಚಾಯತ್ ಅಧ್ಯಕ್ಷ ಬಸವರಾಜ ಕುಂಬಳಾವತಿ ಹೇಳಿದರು. ಪಟ್ಟಣದ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ದೇವಾಂಗ ಸಮಾಜದಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ಜನಾಂಗವು ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆದಿರಬೇಕು. ಅವಕಾಶ ತಾವಾಗಿಯೇ ಬಂದು ಬೀಳುವುದಿಲ್ಲ, ಅದನ್ನು ಪಡೆಯಲು ನಾವು ಸ್ವತಃ ಯಶಸ್ವಿಯಾಗಬೇಕು, ಎಂದು ಅಭಿಪ್ರಾಯಪಟ್ಟರು.

ತಮ್ಮನ್ನು ಪಟ್ಟಣ ಪಂಚಾಯತ ಅಧ್ಯಕ್ಷನನ್ನಾಗಲು ಸ್ಥಳೀಯ ಶಾಸಕರಾದ ಎಚ್.ವೈ. ಮೇಟಿ,

ಸಂಸದ ಪಿ.ಸಿ. ಗದ್ದಿಗೌಡರ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ ಹಾಗೂ ಪಟ್ಟಣ ಪಂಚಾಯತಿಯ 12 ಜನ ಸದಸ್ಯರ ಬೆಂಬಲ ಕಾರಣವೆಂದು ಅವರು ಇದೇ ವೇಳೆ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು. ಯಾರು ನಮ್ಮ ಜೊತೆ ಸದಾ ಬೆನ್ನೆಲುಬಾಗಿ ನಿಂತಿ–ರುತ್ತಾರೋ ಅವರನ್ನು ಜೀವನಪೂರ್ತಿ ಮರೆಯಬಾರದು, ಎಂದು ತಮ್ಮ ಮನದಾಳದ ಮಾತು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನೇಕಾರ ಪ್ರಶಸ್ತಿ ವಿಜೇತ ಲಕ್ಷ್ಮಣ ಕಕ್ಕಣ್ಣವರ ಹಾಗೂ ಕಮತಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಸಂಗಮೇಶ ಶಿನ್ನೂರ ಅವರನ್ನು ಸನ್ಮಾನಿಸಲಾಯಿತು. ದೇವಾಂಗ ಸಮಾಜದ ಅಧ್ಯಕ್ಷ ಪಾಂಡುರಂಗ ಹೋಟಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ದೇವಾಂಗ ಸಂಘದ ನಿರ್ದೇಶಕ ಗೋಪಾಲಪ್ಪ ವನಕಿ ಅತಿಥಿಯಾಗಿ ಭಾಗವಹಿಸಿದ್ದರು. ದೇವಾಂಗ ಸಮಾಜದ ಹಿರಿಯರು, ಯುವಕರು ಹಾಗೂ ಆಡಳಿತ ಮಂಡಳಿಯವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಬಾಗಿಲಕೊಂಡಿ ಮುರಿದು ನಗದು, ಆಭರಣ ಕಳವು



**ಕಲಬುರಗಿ :** ಇಲ್ಲಿನ ಅಶೋಕ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ಪಾರ್ವತಿ ಲೇಔಟ್ ಪ್ರದೇಶದ ಮನೆಯೊಂದರಲ್ಲಿ ಕಳ್ಳತನ ನಡೆದಿದೆ.

ಪಾರ್ವತಿ ಲೇಔಟ್ ನ ನಿವಾಸಿ ಶರಣಬಸಪ್ಪ ಶಂಕ್ರಪ್ಪ ಚೌಧರಿ ಎಂಬಾತರ ಮನೆಯಲ್ಲೇ ಕಳ್ಳತನವಾಗಿದ್ದು,43 ಗ್ರಾಂ. ಬಂಗಾರದ ಆಭರಣಗಳು, 150 ಗ್ರಾಂಬೆಳ್ಳಿ ಹಾಗೂ1ಲಕ್ಷರೂಪಾಯಿನಗದುಹಣಕಳ್ಳತನವಾಗಿದೆ. ಶನಿವಾರ ತಡರಾತ್ರಿ ವೇಳೆಗೆ ಕಳ್ಳರು ಮನೆಯ ಬಾಗಿಲಿನ ಕೊಂಡಿ ಮುರಿದು ಒಳಗೆ ಪ್ರವೇಶಿಸಿ ಮನೆಯ ಅಲಮಾರಿನಲ್ಲಿಟ್ಟಿದ್ದ 1 ಲಕ್ಷ ರೂ. ನಗದು, 15 ಗ್ರಾಂನ ಬಂಗಾರದ ಲಾಕೆಟ್, 5 ಗ್ರಾಂನ 3 ಸುತ್ತುಂಗುರಗಳು, 5 ಗ್ರಾಂನ ಒಂದು ಜೊತೆ ಕಿವಿಯೊಲೆ, 3 ಗ್ರಾಂನ ಉಂಗುರ, 5 ಗ್ರಾಂನ ನಾಣ್ಯ ಸೇರಿದಂತೆ 150 ಗ್ರಾಂ. ಬೆಳ್ಳಿಯ ಆಭರಣಗಳನ್ನು ಕಳವುಗೈದಿದ್ದಾರೆ ಎಂದು ಸಂತ್ರಸ್ತರು ದೂರಿನಲ್ಲಿ ತಿಳಿಸಿದ್ದಾರೆ.

ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅನುಮಾನಾಸ್ಪದ ವ್ಯಕ್ತಿಗಳು ಕಳ್ಳತನಕ್ಕೆ ಕಸರತ್ತು ನಡೆಸುತ್ತಿರುವ ಸಿಸಿ ಕ್ಯಾಮೆರಾದ ದೃಶ್ಯಾವಳಿ ವೈರಲ್ ಆಗುತ್ತಿದೆ.

ಈ ಕುರಿತು ಪ್ರಕರಣ ದಾಖಲಿಸಿಕೊಂಡ ಅಶೋಕ್ ನಗರ ಪೊಲೀಸರು, ಅನುಮಾನಾಸ್ಪದ ವ್ಯಕ್ತಿಗಳ ಪತ್ತೆಗೆ ಬಲೆ ಬೀಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಹೆಲ್ತ್ ಕೇರ್ ಎಕ್ಸ ಲೆನ್ಸ್ ಅವಾರ್ಡ್‌ಗೆ ಭಾಜನರಾದ ಡಾ. ಮುಲ್ಲಾಗೆ ಹಲವರಿಂದ ಅಭಿನಂದನೆ: ಸನ್ಮಾನ

**ಕೊಪ್ಪಳ :** ಇಲ್ಲಿನ ಹಿರಿಯ ವೈದ್ಯ ನಿವೃತ್ತ ಡಿ ಎಚ್ ಓ ಡಾ, ಟಿ. ಹೆಚ್. ಮುಲ್ಲಾ ರವರಿಗೆ ಇತ್ತೀಚಿಗೆ ಕನ್ನಡ ಪ್ರಭ ಸುವರ್ಣ ನ್ಯೂಸ್ ಏಶಿಯ ನೆಟ್ ಸಂಸ್ಥೆ ವತಿಯಿಂದ ಸಾಧಕ ವೈದ್ಯರಿಗೆ ಕೊಡ ಮಾಡಿದ ಹೆಲ್ತ್ ಕೇರ್ ಎಕ್ಸ ಲೆನ್ಸ್ ಅವಾರ್ಡ್ ಗೆ ಭಾಜನರಾಗಿ ಪ್ರಶಸ್ತಿ ಸ್ವೀಕರಿಸಿರುವದಕ್ಕೆ ಕೊಪ್ಪಳ ನಗರದ ಹಲವು ಜನ ಗಣ್ಯರು ರಾಜಕಾರಣಿಗಳು, ಜನಪ್ರತಿನಿಧಿಗಳು ,ಅಧಿಕಾರಿ ವರ್ಗದವರು ಶಿಕ್ಷಕರು,ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ ಡಾ, ಟಿ ,ಹೆಚ್, ಮುಲ್ಲಾ ರವರ ನಿವಾಸಕ್ಕೆ ತೆರಳಿ ಅವರನ್ನು ಸನ್ಮಾನಿಸಿ ಅಭಿನಂದಿಸಿದರು,

ಇಲ್ಲಿ ನ ಹಿರಿಯ ವೈದ್ಯ ಡಾ ಟಿ, ಎಚ್. ಮುಲ್ಲಾ ರವರು ಕಳೆದಐದುದಶಕದಿಂದವೈದ್ಯಕೀಯಕ್ಷೇತ್ರದಲ್ಲಿಉತ್ತಮ ಸೇವೆ ಸಲ್ಲಿಸಿರುವದಲ್ಲದೆ ಸರ್ಕಾರಿ ಸೇವೆ ಯನ್ನು ಸಹ ನಿರ್ವಹಿಸಿ ನಿವೃತ್ತಿಗೊಂಡ ಬಳಿಕ ತನ್ನ ವೈದ್ಯಕೀಯ ಸೇವೆಯನ್ನು ನಿರಂತರವಾಗಿ ಮುಂದುವರಿಸಿದ್ದು ಸಾಮಾನ್ಯ ಜನರ ,ವಿಶೇಷವಾಗಿ ಬಡ ಜನರ ಬಡ ರೋಗಿಗಳ ಪಾಲಿಗೆ ಸಂಜೀವಿನಿಯಾಗಿ ಶ್ರಮಿಸುತ್ತ ಬಂದಿರುವ ಇಂತಹ ವೈದ್ಯರಿಗೆ ಇಂಥ ಪ್ರತಿಷ್ಠಿತ ಹೆಲ್ತ್ ಕೇರ್ ಎಕ್ಸ್ ಲೆನ್ಸ್ ಅವಾರ್ಡ್ ಲಭಿಸಿರುವುದು ನಮ್ಮೆಲ್ಲರಿಗೆ ಹೆಮ್ಮೆ ಮತ್ತು ಸಂತಸ ಉಂಟು ಮಾಡಿದೆ ಎಂದು ಗಣ್ಯರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ,

ಪ್ರಶಸ್ತಿ ಪುರಸ್ಕೃತ ಡಾ, ಟಿ ಹೆಚ್ ಮುಲ್ಲಾ ರವರ ನಿವಾಸಕ್ಕೆ ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷ ಎಸ್ ಬಿ ನಾಗರಳ್ಳಿ, ಭೇಟಿ ಮಾಡಿ ಸನ್ಮಾನಿಸಿ ಮಾತನಾಡಿ ಡಾ, ಟಿ ಹೆಚ್ ಮುಲ್ಲಾ ರವರ ದಾಂಪತ್ಯ ಜೀವನ ಕೂಡ ಐದು ದಶಕ ಕಳೆದಿದೆ ಅದರ ಜೊತೆಗೆ ವೈದ್ಯಕೀಯ ಕ್ಷೇತ್ರದ ಸೇವೆ ಕೂಡ ಐದು ದಶಕ ಕಳೆದು ಮುನ್ನಡೆದಿದೆ ಇದು ನಮ್ಮೆಲ್ಲರಿಗೆ ತುಂಬಾ ಹೆಮ್ಮೆ ಮತ್ತು ಇವರ ಬದುಕು ನಮ್ಮೆಲ್ಲರಿಗೆ

ಮಾದರಿ ಯಾಗಿದೆ ಎಂದು ಬಣ್ಣಿಸಿದ ಅವರು ಡಾ, ಟಿ ಹೆಚ್ ಮುಲ್ಲಾ ಮತ್ತು ಅವರ ಪತ್ನಿ ಶ್ರೀಮತಿ ಶಾಕೀರಾ ಬೇಗಮ್ ಮುಲ್ಲಾ ರವರಿಗೆ ಅಭಿನಂದಿಸಿದರು,ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಸಮಾಜದ ಹಿರಿಯ ಮುಖಂಡ ಸೈಯದ್ ಜುಲ್ಲು ಖಾದರ್ ಖಾದ್ರಿ, ನಗರಸಭೆಯ ಮಾಜಿ ಸದಸ್ಯ ಈರಣ್ಣ ಗಾಣಿಗೇರ್, ನಗರ ಸಭೆಯ ನಿವೃತ್ತ ಅಭಿಯಂತ ಎಸ್ ಸಿ ಪಾಟೀಲ್ ,ಸಮಾಜದ ನಾಯಕ ಹಾಗೂ ಸಮಾಜ ಸೇವಕರಾದ ಆಯುಬ್ ಹುರಕಡ್ಲಿ, ಅಲ್ಲದೆ ಡಾ, ಆನಂದ್ ಸೇರಿ ಹಲವರು ಸನ್ಮಾನಿಸಿದರು.

# ಸರ್ಕಾರದ ಮಾರ್ಗಸೂಚಿ ಅನ್ವಯ ಹಬ್ಬವನ್ನು ಆಚರಿಸಿ



**ಕಲಾದಗಿ :** ಸರ್ಕಾರದ ಮಾರ್ಗಸೂಚಿ ಅನ್ವಯದೊಂದಿಗೆ ಗಣೇಶ ಹಬ್ಬವನ್ನು ಆಚರಿಸಿ ಎಂದು ಬಾಗಲಕೋಟೆ ಡಿವೈಎಸ್ಪಿ ಗಜಾನನ ಸುತಾರ ಹೇಳಿದರು.

ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಮುಂಬರುವ ಗಣೇಶ ಹಬ್ಬ ಹಾಗೂ ಈದ್ ಮಿಲಾದ ಹಬ್ಬಗಳ ಶಾಂತಿಪಾಲನ ಸಭೆಯಲ್ಲಿ ಮಾತನಾಡಿದ ಅವರು. ಹೆಚ್ಚಿನ ಶಬ್ದವನ್ನು ಮಾಡುವ ಡಿಜೆ ವನ್ನು ಸಂಪೂರ್ಣವಾಗಿ ಸರ್ಕಾರ ನಿಷೇಧಿಸಿದೆ. ತಾವೆಲ್ಲರೂ ಸಕಾರಾತ್ಮಕವಾಗಿ ದುಬಾರಿ ವೆಚ್ಚವನ್ನು ಖರ್ಚು ಮಾಡಿ. ಹಿರಿಯ ನಾಗರಿಕರಿಗೆ ಮತ್ತು ಮಕ್ಕಳಿಗೆ. ಹೃದಯ ರೋಗಿಗಳಿಗೆ ತೊಂದರೆ ಕೊಡುವ ಸೌಂಡ್ ಅನ್ನು ಹಚ್ಚುವುದಕ್ಕಿಂತ ಅದೇ ಹಣವನ್ನು ಒಂದು ಒಳ್ಳೆಯ ಕೆಲಸಕ್ಕೆ ಬಳಸಿ. ಗಣೇಶ ಹಬ್ಬಕ್ಕೆ ಒಂದೇ ಸೂರಿನಡಿಯಲಿ ಅನುಮತಿಗಳನ್ನು ನೀಡಲಾಗುವುದು. ಎಲ್ಲರೂ ಅನುಮತಿಗಳನ್ನು ಪಡೆದುಕೊಳ್ಳಿ. ಗಣೇಶ ಮಂಡಳಿಯವರು ತಮ್ಮ ಸ್ವಯಂಸೇವಕರನ್ನು ನೇಮಿಸಿಕೊಳ್ಳಿ. ನೈಸರ್ಗಿಕವಾಗಿರುವ ಮಣ್ಣಿನ ಗಣಪತಿಗಳನ್ನು ಪ್ರತಿಷ್ಠಾಪಿಸಿ ಅನ್ಯ ಧರ್ಮೀಯರಿಗೆ ಧಕ್ಕೆಯಾಗದಂತೆ ಬ್ಯಾನರ್ ಫ್ಲೆಕ್ಸ್. ಹಾಕಿ ಎಂದರು. ಬಾಗಲಕೋಟೆ ಗ್ರಾಮೀಣ ಸಿಪಿಐ ಎಚ್ ಆರ್ ಪಾಟೀಲ್. ಎರಡು ಹಬ್ಬಗಳ ಸರ್ಕಾರದ ಮಾರ್ಗಸೂಚಿಗಳನ್ನು ಹೇಳಿದರು. ಕಲಾದಗಿ ಪಿಎಸ್ಐ ಪ್ರವೀಣ ಬೀಳಗಿ. ಸಭೆ ಸ್ವಾಗತಿಸಿ ವಂದಿಸಿದರು. ಹೆಚ್ಚುವರಿ ಪಿಎಸ್ಐ ನೂರಜಾನ ಸಾಬರ . ಕಲಾಧಗಿ ಹೆಸ್ಕಾಂ ಶಾಕಾಧಿಕಾರಿ ಬಂಡಿವಡ್ಡರ ಹಿರಿಯರಾದ ಬಶಟ್ಟಪ್ಪ ಅಂಗಡಿ.ಸಂಗಪ್ಪ ಛಬ್ಬಿ. ಮಲ್ಲಪ್ಪ ಜಮಖಂಡಿ ಬಾಬು ತೇಲಿ ಸದಾಶಿವ ಸಣ್ಣಕ್ಕಿ ಸಭೆ ಉದ್ದೇಶ ಮಾತನಾಡಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಪಕೀರಪ್ಪ ಮಾದರ. ಎಚ್ ಐ ರೋಣ. ಅಬ್ದುಲ್ ಖಾನ್ ಪಠಾಣ. ರೆಹಮಾನ ಸಾಬ ಮಕಾನದಾರ . ಶ್ಯಾಮ್ ಕಾಳೆ. ಅಂಜಲಿ ಬಾನು. ಹನುಮಂತ ಗದ್ದನಕೇರಿ. ರಮೇಶ ಮಾದರ. .ಶ್ರೀಧರ ಮಾದರ. ಶ್ರೀಶೈಲ್ ಕುಂದರಗಿ. ಯಮನಪ್ಪ ಬೂದಿಹಾಳ. ಹನುಮಂತ ತಳವಾರ. ಪರಶುರಾಮ ಮಾದರ. ಹವಳಪ್ಪ ಮಾದರ. ಸೇರದಂತೆ ಇತರರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618